1




2

3



4











A Circumnavigation to the world of Dance and Performing Arts : A complete Bi-lingual Journal
RNI No :KARKAN/2009/29752

ಜೇಷ್ಠ–ಆಷಾಢ 2010

ಸಂಪುಟ: 04 ಸಂಚಿಕೆ: –03

ನೂಪುರ ಭ್ರಮರಿ
...ನರ್ತನ ಜಗತ್ತಿಗೊಂದು ಪರಿಭ್ರಮಣ

**ಸಂಪಾದಕರು:** ಮನೋರಮಾ. ಬಿ.ಎನ್
**ವೆಬ್‌ಸೈಟ್ ವಿನ್ಯಾಸ:** ಮಹೇಶ್ ಎಳ್ಯಡ್ಕ,
ಧ್ಯೇಯ ಸಾಫ್ಟ್‌ವೇರ್ ಸೊಲ್ಯುಷನ್ಸ್ ಪ್ರೈ.ಲಿ
**ವಿತರಣಾ ಮುಖ್ಯಸ್ಥ:** ವಿಷ್ಣುಪ್ರಸಾದ್ ನಿಡ್ಡಾಜೆ
**ಕಛೇರಿ ನಿರ್ವಹಣೆ:** ರಾಜ್‌ಗೋಪಾಲ್.ಬಿ.ಎನ್
**ಪ್ರಕಾಶನ:** 'ಸಾನಿಧ್ಯ', ಮಡಿಕೇರಿ
**ಪುಟ ವಿನ್ಯಾಸ:** ರಾಧೆ

## ಈ ಸಂಚಿಕೆಯಲ್ಲಿ....

## ಗ್ರೀಷ್ಮ ಗಾಂಭೀರ್ಯ

ಅಂತರಂಗದೊಳಗೆ..

**ಮಂಜೀರ**........ 04
**ನುಡಿ–ನಮನ–ಅಂಜಲಿ :** ಮಲ್ಪೆ ರಾಮದಾಸ ಸಾಮಗ........ 06
**ನರ್ತನ ಸುರಭಿ :** ನೃತ್ಯ– ಅಂದು, ಇಂದು, ಮುಂದು........ 08
**ಲಲಿತ ಲಹರಿ :** ವಿಶ್ವಗೋಪಾಲ........ 10
**ಹಸ್ತ ಮಯೂರಿ :** ಚತುರ ಹಸ್ತ........ 16
**ರಂಗಸ್ಥಳ :** ಮತ್ತೆ ಮತ್ತೆ ಕಾಡುವ ನಾವಡರು........ 20
**ದರ್ಪಣ :** ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ........ 22
**ಒಳನೋಟ**........ 25
**ನಿಮ್ಮ ಬರೆಹ ನಮ್ಮ ಓದು**........ 25

All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own not of Noopura Bhramari.

Visit our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ– ವಿಚಾರ– ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ 10ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.



# ಮಂಜೀರ

ಸಂಗೀತ ನೃತ್ಯಗಳೆಂದರೆ ಯುದ್ಧವೇ ? ಎಂತೆಂತ ಕಲ್ಲು ಮನಸ್ಸುಗಳನ್ನು ಕರಗಿಸಿದ ಸಂಗೀತ ನೃತ್ಯಸಂಸ್ಕಾರಗಳು ಇಂದಿಗೆ ಅಕ್ಷರಶಃ ಸಮರಾಂಗಣವೇ? ಖಂಡಿತಾ ಹೌದು ಎನ್ನದೆ ಬೇರೆ ನಿರ್ವಾಹವಿಲ್ಲ. ಆಗ ತಾನೇ ಹುಟ್ಟಿದ ಎಳೆಕಂದಮ್ಮಗಳೂ ಈ ಸಮರಾಂಗಣಕ್ಕೆ ಸಜ್ಜಾಗುವ ಕಾಲ ಬಹುಶಃ ದೂರವಿಲ್ಲವೇನೋ ಅನ್ನಿಸುತ್ತಿದೆ. ಕಾರಣ ಕೇಳುತ್ತೀರಾ? ಮಾಧ್ಯಮ.

ಅಂದೊಂದು ಕಾಲದಿಂದಲೂ ದೂರದರ್ಶನ ಪ್ರಸಾರ ಮಾಡುತ್ತಾ ಬಂದಿರುವ ಸದಭಿರುಚಿಯ ಶಾಸ್ತ್ರೀಯ, ಲಘು ಸಂಗೀತ ನೃತ್ಯಗಳು ಇಂದಿಗೂ ಬಹುಷಃ ಅದೊಂದೇ ವಾಹಿನಿಗೆ ಸೀಮಿತವಿರಬೇಕೆನ್ನಿಸುವಷ್ಟರ ಮಟ್ಟಿಗೆ ಸಂಗೀತ– ನೃತ್ಯಗಳ ಅಪಭ್ರಂಶಗಳು 'ರಿಯಾಲಿಟಿ' ಎನ್ನುವ ಹೆಸರಲ್ಲಿ ತಯಾರಾಗಿವೆ. ಆ ಮೂಲಕ ಅಕ್ಷರಶಃ ಸಂಸ್ಕೃತಿಯ 'ಶವಸಂಸ್ಕಾರ'ವನ್ನೇ ಮಾಡುತ್ತಲಿವೆ. ಸಂಗೀತ–ನರ್ತನ ಕ್ಷೇತ್ರಕ್ಕೆ ಎಂತಹ ಪ್ರೋತ್ಸಾಹ ನೋಡಿ !

ಪುಟ್ಟ ಪುಟ್ಟ ಮಕ್ಕಳಿಂದ ಹಿಡಿದು ಅಜ್ಜಂದಿರ ವರೆಗೂ ಹಾಡಿಸುವುದಕ್ಕೆ, ಕುಣಿಸುವುದಕ್ಕೆ ಶುರು ಮಾಡಿ ವರುಷಗಳೇ ಕಳೆದಿವೆ. ಪರಿಣಾಮ, "ಎಷ್ಟು ದಿನದಲ್ಲಿ ನನ್ನ ಮಗ/ಮಗಳು ಸಂಗೀತ ಕಲಿತು ಟಿ.ವಿ.ಯಲ್ಲಿ ಹಾಡಬಹುದು?"ಎಂಬ ಪೋಷಕರ ನಿರೀಕ್ಷೆ ; ಜೊತೆಗೆ ಒಂದು–ಎರಡು ಹಾಡಿಗೆ ಪ್ರಸಿದ್ಧಿ ಮಾಡಿಸಿ ಪ್ರೈಜ್ ಗಿಟ್ಟಿಸಿಕೊಳ್ಳಬೇಕೆಂಬ ದುರಾಸೆಗೆ ಶಿಕ್ಷಕರೇ ಒತ್ತಾಸೆ ! ಹಾಗಾಗಿಯೇ ಬೀದಿ ಬೀದಿಗಳಲಿ ತರಗತಿಗಳು ತಲೆಯೆತ್ತಿವೆ ನೋಡಿ !

ಪ್ರಸಿದ್ಧಿ, ಪ್ರತಿಷ್ಠೆಯ ಆಸೆ ಯಾರಿಗಿರುವುದಿಲ್ಲ ಹೇಳಿ? ಹೊಟ್ಟೆ, ಬಟ್ಟೆ, ಮನೆಯ ನಂತರ ಐಶ್ವರ್ಯದ ಆಸೆಯೊಂದಿಗೆ ಹಿಂಬಾಲಿಸುವುದಿದ್ದರೆ ಅದು ಈ ಪ್ರಸಿದ್ಧಿಯ ಭೂತ ! ಇಂದು ಗಲ್ಲಿಗಳಲ್ಲಿ ರದ್ದಿ ಆಯ್ವ ಹುಡುಗನಿಂದ ಹಿಡಿದು ಕೋಟ್ಯಾಧಿಪತಿಗಳ ವರೆಗೂ ಹಣಿಕಿ ಹಾಕಿ ನಿಂತಿದೆ. ಸಿದ್ಧಿಯೇ ಬೇಡ–ಪ್ರಸಿದ್ಧಿ ಮಾತ್ರ ಜೊತೆಗಿರಬೇಕು ಎಂದರೆ ಏನು ತಾನೇ ಮಾಡಲು ಸಾಧ್ಯ ? ! ತೇಜೋವಧೆ ಮಾಡಿಕೊಂಡರೂ ಸರಿ, ತನ್ನ ಹೆಸರು ಮಾಧ್ಯಮಗಳಲ್ಲಿ ರಾಚಬೇಕು, ಯಶಸ್ಸು ಕಾಣಬೇಕು, ಅದೂ ತಕ್ಕುದಾದ ಅರ್ಹತೆಗಳನ್ನು ಸಂಪಾದಿಸಿಕೊಳ್ಳುವ ಮೊದಲೇ, ದಿನ ಬೆಳಗಾಗುವುದರೊಳಗೆ 'ಫೇಮಸ್' ಕೈಯ್ಯಲ್ಲಿರಬೇಕು. ಹೊಸ ಅವಕಾಶಗಳನ್ನು ಬಾಚಿಕೊಳ್ಳುವುದರೊಂದಿಗೆ ಸರ್ವೋತ್ತಮನಾಗಿಬಿಡಬೇಕು. ಅಲ್ಪ ಅವಧಿಯಲ್ಲೇ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡುವ ಅವಕಾಶ, ಅಪಾರ ಹಣ ಸಂಪಾದಿಸಬೇಕು ; ಸಾರ್ವಜನಿಕ ವಲಯದಲ್ಲಿ ಗುರುತಿಸಿಕೊಳ್ಳಬೇಕು ; ಅವಕಾಶವೂ ದಂಡಿಯಾಗಿ ಮನೆ ಬಾಗಿಲಿಗೆ ಬಂದು ಬೀಳಬೇಕು ! ಫಲ; ಅದನ್ನೇ ಮಾರ್ಕೆಟ್ಟಾಗಿಸಿಕೊಂಡ ಮಾಧ್ಯಮಗಳು ಹೊಸ ಹೊಸ ಮಾರುಕಟ್ಟೆಗಳನ್ನು ಹುಟ್ಟುಹಾಕುತ್ತವೆ! ಟಿಆರ್‌ಪಿ ಹೆಚ್ಚಸಿಕೊಳ್ಳುವತ್ತ ಕಣ್ಣು ನೆಡುತ್ತವೆ !

ಹಾಡೂ, ನೃತ್ಯಗಳಿಗಿಂತಲೂ ಸ್ಪರ್ಧಿಗಳ ವಸ್ತ್ರಾಲಂಕಾರ, ಮನೆಯ ಆರ್ಥಿಕ ಸ್ಥಿತಿ, ಅವರ ವೈಯಕ್ತಿಕ ಜೀವನ, ಹೆತ್ತವರ ಆತಂಕ, ಹಾರೈಕೆ, ಸ್ಪರ್ಧಿಗಳ ತುಮುಲ, ಸಂಗೀತಕ್ಕೆ–ಬೆಳಕಿನ ಅಬ್ಬರಕ್ಕೆ ತಕ್ಕಂತೆ ಕುಣಿಯುವುದು, ತೀರ್ಪುಗಾರ–ಸ್ಪರ್ಧಿಗಳ ವಾಗ್ವಿವಾದ, ಪರದೆಯ ಹಿಂದಿನ ಅರಚಾಟ, ಭಾವೋತ್ಕರ್ಷ, ಆಕಳಿಸಿ ತೂಕಡಿಸುವುದರ ಮೇಲೆ ಇದೆ ಇಂದಿನ ಕ್ಯಾಮೆರಾ ಕಣ್ಣು! ನೇರವಾಗಿ ರಿಕಾರ್ಡಿಂಗ್ ಆದಂತೆ ನೇರ ಸಂಕಲನ ಆಗಿರಬೇಕು ಎಂದು ಭಾವಿಸಿದ್ದಲ್ಲಿ ಅದು ತಪ್ಪು. ಕ್ಯಾಮೆರಾಗಳ ಮುಂದೆ ನಿಂತಾಗ ಅವರ ವ್ಯಕ್ತಿತ್ವವನ್ನೇ ನಿರ್ವಹಿಸುವ ಸೂತ್ರಧಾರನಿರುತ್ತಾನೆ; ಅಂತೆಯೇ ತಮಗೆ ಬೇಕಾದಂತೆ ಕತ್ತರಿ ಪ್ರಯೋಗ ಮಾಡುವ ಸಂಪಾದಕನೂ ಇರುತ್ತಾನೆ. ಇದರೊಂದಿಗೆ ತೀರ್ಪುಗಾರರ ಪಕ್ಷಪಾತ ಧೋರಣೆ ಮತ್ತು ವೈಯಕ್ತಿಕ ಇಷ್ಟಾನಿಷ್ಟಗಳೂ







ಸೇರಿದರಂತೂ ಪ್ರತಿಭಾವಂತರು ಮಂಕಾಗುವುದರೊಂದಿಗೆ ಮರ್ಯಾದೆ ಕಳೆದುಕೊಳ್ಳದೆ ವಿಧಿಯಿಲ್ಲ.

ಆಶಾಭಾವನೆಯೇ ಕೊನೆಗೆ ಅಪರಾಧಿ ಸ್ಥಾನದಲ್ಲಿ ನಿಲ್ಲುವಂತೆ ಮಾಡುತ್ತಿದೆ ಎಂಬುದಕ್ಕೆ ರಿಯಾಲಿಟಿ ಶೋ ಒಳ್ಳೆಯ ಉದಾಹರಣೆಯಾಗಿ ನಿಂತಿದೆ. ಒಂದು ಸುತ್ತಿನಲ್ಲಿ ಸೋತ ಸ್ಪರ್ಧಿಗಳನ್ನು ಎಲಿಮಿನೇಷನ್ ರೌಂಡ್ ಮೂಲಕ ಉಚ್ಚಾಟಿಸುವ ಪ್ರಕ್ರಿಯೆ ನಾಟಕೀಯ ಮಾತ್ರವಲ್ಲ ಶೋಷಣೆಯೂ ಹೌದು. ಪೋಷಕರು ಅಳುವುದು, ತೀರ್ಪುಗಾರರು ಸಂತೈಸುವುದು, ಅಪ್ಪಿ ಮುದ್ದಾಡುವುದು, ಅವರೊಂದಿಗೆ ತಾವೂ ಅಳುವುದು, ಸೋತಿದ್ದಕ್ಕೆ ಸಹಜವಾಗಿ ಅಳು ಬಂದು ಮತ್ತೆ ಸಮಾಧಾನವಾದರೂ, ಅದನ್ನೇ ತಿರುಗಿಸಿ ಮುರುಗಿಸಿ ಮತ್ತೆ ಮತ್ತೆ ಅಳಿಸಿ ರಿವೈಂಡ್ ಆಗುವ ವಿಷಾದಗೀತೆ.., ಒಟ್ಟಿನಲ್ಲಿ ಸೋಲಿನ ಭಾವನೆಗಳನ್ನು ವೈಭವೀಕರಿಸಿ, ನೋಡುಗರನ್ನು ರಂಜಿಸುವುದು, ಗೆಲುವನ್ನು ಅತಿರಂಜಿತವನ್ನಾಗಿಸುವುದು. ಭಾವನೆಗಳನ್ನು ಬಿಕರಿ ಮಾಡುವ ಮೂಲ ಪಾಠ. ಅನೇಕ ಬಾರಿ ಸ್ಪರ್ಧಿಗಳು ವೇದಿಕೆಯ ಮೇಲೆ ತಲೆ ಸುತ್ತಿ ಬಿದ್ದಿರುವ, ಮಾನಸಿಕವಾಗಿ ನೊಂದು ಹೋದ, ವೈಕಲ್ಯಕ್ಕೆ ತುತ್ತಾದ ಪ್ರಕರಣಗಳೂ ನಡೆದಿವೆ. ಮಕ್ಕಳ ಬಾಲ್ಯವನ್ನೇ ಬೇಟೆಯಾಡಿ ಭವಿಷ್ಯವನ್ನೇ ಬಲಿ ತೆಗೆದುಕೊಂಡಿವೆ !

ಇನ್ನೂ ಇದೆ ತಂತ್ರ ! : ಸಿನೆಮಾ, ಧಾರಾವಾಹಿ ಜಗತ್ತಿನ ನಟ/ನಟಿ/ನಿರ್ದೇಶಕ ಮಹಾಶಯರ ಅತಿಥಿ ಗಣ್ಯರಾಗಿ ಆಗಮನ (ಸಂಗೀತ–ನೃತ್ಯದ ತಲೆಬುಡ, ಮಟ್ಟ ಗೊತ್ತಿಲ್ಲದಿದ್ದರೂ !) ಅಥವಾ ಈಗಾಗಲೇ ಇಮೇಜ್ ಕಡಿಮೆಯಿರುವ, ಔಟ್‌ಡೇಟೆಡ್ ಸೆಲೆಬ್ರೆಟಿಗಳ ಮುಖದರ್ಶನ ! ಒಟ್ಟಿನಲ್ಲಿ ಚಿತ್ರತಾರೆಯರಿಗೂ, ಚಿತ್ರಗಳಿಗೂ ಸುಲಭದ ಪ್ರಸಿದ್ಧಿ ಬೇಕು ! ಅದಕ್ಕೆ ಮಾಧ್ಯಮಗಳು ಈ ಬಗೆಯ ಜಾಹೀರಾತು ತಂತ್ರಗಳನ್ನು ಮಾರಾಟ ಮಾಡಬೇಕು ! 'ಶ್ರೋತೃಗಳ ವೋಟುಗಳು ಬಹಳ ಮುಖ್ಯ, ಕಾಪಾಡಿ, ಕಾಪಾಡಿ' ಎನ್ನುತ್ತಾ ಅಂಗಾಲಾಚಿ ಎಂದು ಸ್ಪರ್ಧಿಗಳು ಭಿಕ್ಷೆ ಬೇಡಬೇಕು! ಇದರಲ್ಲಿ ಪ್ರತಿಭೆಯ ಪಾತ್ರ ಎಷ್ಟಿದೆ, ದುಡ್ಡು ಮಾಡುವ ಉಪಾಯ ಎಷ್ಟಿದೆ ಎಂಬುದು ಬುದ್ಧಿಯಿರುವ ಯಾವ ವ್ಯಕ್ತಿಗಾದರೂ ಅರ್ಥವಾಗುತ್ತದೆ !

ಸ್ವಾರ್ಥ ತಪ್ಪಲ್ಲ. ಅಸ್ತಿತ್ವದ ಸಮಸ್ಯೆ ಬಂದಾಗ ಚೂರುಪಾರು ಸ್ವಾರ್ಥ ಶಿಕ್ಷಾರ್ಹವೇನೂ ಅಲ್ಲ. ಆದರೆ ತಮ್ಮ ಜೊತೆಗೆ ನಂಬಿಕೊಂಡ ಕಲೆಗಳನ್ನು ಮಾರಿಕೊಳ್ಳುವ ಮಟ್ಟಿಗಿನ ಸ್ವಾರ್ಥವೆಂದರೆ..? ಅದು ದ್ರೋಹವೆನ್ನದೆ ವಿಧಿಯಿಲ್ಲ! ಇಂತಹ ಅರೆಕ್ಷಣದ ಸುಖೋಪಭೋಗಕ್ಕೆ ನಾವು ತೆರಬೇಕಾದದ್ದು ದಶಕಗಳ ತರುವಾಯವೂ ಸುಧಾರಿಸಿಕೊಳ್ಳಲಾಗದ ಹೊಡೆತವಿರಬಹುದೇ ಮುಂದೆ ! ಕಾಲವೇ ಉತ್ತರಿಸಬೇಕು.

ಅಂದಹಾಗೆ ಹೊಸ ನಿರೀಕ್ಷೆ, ಹೊಸ ಭಾವ, ಹೊಸ ಪರಿಸರ, ಹೊಸ ಬಗೆಯ ನೋಟ–ನೂಪುರ ಹೊಂದಿಕೊಳ್ಳುತ್ತಲಿದೆ. ಚಲನೆಯೇ ಜಗದ ವಾಸ್ತವ ನಿಯಮ ಅನ್ನುವುದು ನೂಪುರ ಹುಟ್ಟಿಕೊಂಡಾಗಿನಿಂದ ಅದರೊಂದಿಗಿನ ನಿರಂತರ ಒಡನಾಟದಲ್ಲಿ, ಹುಡುಕಾಟದಲ್ಲಿ ಕಂಡುಕೊಂಡ ನಿತ್ಯ ಸತ್ಯ. ಒಂದೊಂದು ಬಗೆಯ ಅನುಭವವವನ್ನು ವರುಷ ವರುಷವೂ ಕಟ್ಟಿಕೊಡುವ ಉತ್ಸಾಹದಲ್ಲಿದೆ ನೂಪುರ. ಈ ಪಯಣದಲ್ಲಿ ಶ್ರದ್ಧೆಯಿಂದ ಜೊತೆಯಾದ, ಜೊತೆಯಿರುವ, ಜೊತೆಯಾಗಲಿರುವ ಸಮಸ್ತ ಸಹೃದಯ ಬಾಂಧವರಿಗೂ ಹೃತ್ಪೂರ್ವಕ ಅಭಿವಂದನೆಗಳು.

**ಪ್ರೀತಿಯಿಂದ,**

**☯ ಸಂಪಾದಕರು**

# ಮಲ್ಪೆ ರಾಮದಾಸ ಸಾಮಗ

ನುಡಿ-ನಮನ-ಅಂಜಲಿ



* ಜನನ : 20–6–1926
* ತಂದೆ : ಮಲ್ಪೆ ಲಕ್ಷ್ಮೀನಾರಾಯಣ ಸಾಮಗ
* ತಾಯಿ : ಲಕ್ಷ್ಮೀ ಅಮ್ಮ
* ಅಣ್ಣ : ಮಲ್ಪೆ ಶಂಕರನಾರಾಯಣ ಸಾಮಗ
* ನಿಧನ : 27–4–2010 – ಮಣಿಪಾಲ ಆಸ್ಪತ್ರೆಯಲ್ಲಿ
* ದೇಹಸಂಸ್ಕಾರ : 28–4–2010, ಬೆಳಿಗ್ಗೆ 9–45, ಕೊಡವೂರು ಗ್ರಾಮದ ಮೂಡಬೆಟ್ಟು ಸ್ವಗೃಹ.








ಇಪ್ಪತ್ತನೇ ಶತಮಾನದ ಯಕ್ಷಗಾನ ಲೋಕ ಇಬ್ಬರು ಹಿರಿಯ ಕಲಾವಿದರನ್ನು ಕಂಡಿದೆ. ಅವರು ದೊಡ್ಡ ಸಾಮಗ ಅಂದರೆ ಮಲ್ಪೆ ಶಂಕರನಾರಾಯಣ ಸಾಮಗ ಮತ್ತೊಬ್ಬರು ಸಣ್ಣ ಸಾಮಗರೆಂದೇ ಖ್ಯಾತರಾದ ಅವರ ತಮ್ಮ ಮಲ್ಪೆ ರಾಮದಾಸ ಸಾಮಗ. ದೊಡ್ಡ ಸಾಮಗರು ಸ್ವಾತಂತ್ರ್ಯ ಹೋರಾಟಗಾರರಾಗಿ, ಕಲಾವಿದನಾಗಿ ಅಸಾಧಾರಣ ಕೊಡುಗೆಯನ್ನಿತ್ತು ಯಕ್ಷರಂಗವನ್ನು ಸುಮಾರು 4 ದಶಕಗಳ ಕಾಲ ಆಳಿ ಹೋದವರು. ಸ್ವತಃ ಶೇಣೀ ಗೋಪಾಲಕೃಷ್ಣ ಭಟ್ಟರೂ ಕೂಡಾ ಅವರನ್ನು 'ಗುರು' ಎಂದೇ ಸಂಬೋಧಿಸುತ್ತಿದ್ದರು. ಅವರ ತಮ್ಮ ಸಣ್ಣ ಸಾಮಗರೋ ಶೇಣಿ ಅವರೊಂದಿಗಿನ ತಾಳಮದ್ದಲೆಗಳಿಗೆ ಒಳ್ಳೆಯ ಜೊತೆ.

ಸಣ್ಣ ಸಾಮಗರನ್ನು ಹರಿದಾಸ ಮಲ್ಪೆ ರಾಮದಾಸ ಸಾಮಗರೆಂದು ಸಂಬೋಧಿಸುವುದರಲ್ಲಿ ಹೆಚ್ಚು ಅರ್ಥವಿದೆ. ಹಾಗೇ ನೋಡಿದರೆ, ಸಾಮವೇದದಲ್ಲಿನ ಅಸಾಧಾರಣವಾದ ಜ್ಞಾನವನ್ನು ಕಂಡ ಶೃಂಗೇರಿ ಜಗದ್ಗುರುಗಳು 19ನೇ ಶತಮಾನದಲ್ಲಿ ಇವರ ಕುಟುಂಬಕ್ಕೆ ಇತ್ತ ಬಿರುದು 'ಸಾಮಗ '. ಅದಕ್ಕೆ ತಕ್ಕಂತೆಯೇ ನಡೆದುಕೊಂಡವರು ಈರ್ವರು ಸಹೋದರರು.

ಅನಾರೋಗ್ಯದಿಂದ ಉಡುಪಿಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಸಣ್ಣ ಸಾಮಗರು ಮೊನ್ನೆ ಮೊನ್ನೆ ಏಪ್ರಿಲ್ 27 ರ ಮಂಗಳವಾರ ಮರೆಯಾಗುವ ಹೊತ್ತಿಗೆ ಅವರಿಗೆ 84 ವರ್ಷ ವಯಸ್ಸಾಗಿತ್ತು. ಎರಡು ವರುಷಗಳ ಹಿಂದೆ ಅನಾರೋಗ್ಯಕ್ಕೆ ತುತ್ತಾಗಿ, ಒಂದು ಕಾಲನ್ನು ಕಳೆದುಕೊಂಡ ನಂತರ ಪತ್ನಿ ನಾಗರತ್ನ ಅವರ ಆಸರೆಯಾಗಿದ್ದರು.




*** ವಿದ್ಯಾಭ್ಯಾಸ : ಮಲ್ಪೆ ಎಲಿಮೆಂಟರಿ ಶಾಲೆ, ಕೊಡವೂರು ಹಾಯರ್ ಪ್ರೈಮರಿ ಶಾಲೆ. ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಶನ್ ಪಾಸ್. ನಂತರ ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ವಿದ್ಯಾರ್ಜನೆ.**

*** ವಿವಾಹ : 1947ರಲ್ಲಿ ನಾಗರತ್ನ ಇವರೊಂದಿಗೆ**

*** ಐವರು ಮಕ್ಕಳು : ವಾರಿಜಾ, ಪ್ರಸಿದ್ಧ ಯಕ್ಷಗಾನ ಕಲಾವಿದ ವಾಸುದೇವ ಸಾಮಗ, ಅಶೋಕ (ದಿವಂಗತ), ಮಾಲಿನಿ, ಹಾಸ್ಯಲೇಖಕಿ ಟಿ.ಎಸ್. ಅಂಬುಜಾ**

ಯಕ್ಷಗಾನ, ಹರಿಕಥೆ, ತಾಳಮದ್ದಳೆ, ಬಯಲಾಟಗಳಲ್ಲಿ ಸುಮಾರು ಐದಾರು ದಶಕಗಳ ಕಾಲ ಮಿಂಚಿ, ಅಪ್ರತಿಮ ಮಾತುಗಾರನಾಗಿ, ಅಪೂರ್ವ ವಿದ್ವತ್ತಿನಿಂದ ಮೆರೆದವರು ಸಣ್ಣ ಸಾಮಗರು. ಅವರು ಚಲಿಸುವ ಜ್ಞಾನಕೋಶ ಎಚಿದರೆ ತಪ್ಪಾಗಲಾರದು. ತೆಂಕು–ಬಡಗು ತಿಟ್ಟುಗಳ ಕುರಿತ ಅಪೂರ್ವವೆನಿಸುವ ಅರಿವು ಅವರದ್ದು. ಮಾತ್ರವಲ್ಲ ತುಳು ಯಕ್ಷಗಾನ ಲೋಕವನ್ನು ಸುಮಾರು 2 ದಶಕಗಳ ಕಾಲ ಆಳಿದವರು. ಅವರ ಕಾಂತು ಪೂಂಜನ ಪಾತ್ರವಚಿತೂ ವ್ಮರೆಯಲಸಾಧ್ಯ. ಉಡುಪಿಯ ರಾಜಾಂಗಣದಲ್ಲಿ 2008ರಲ್ಲಿ ನಡೆದ ಮೂರನೆ ಅಖಿಲ ಭಾರತ ಯಕ್ಷಗಾನ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**–19ನೇ ಪುಟಕ್ಕೆ**



## ನರ್ತನ ಸುರಭಿ

# ‘ನೃತ್ಯ : ಅಂದು, ಇಂದು, ಮುಂದು’

✦ ನಾಟ್ಯಾಚಾರ್ಯ ಕೆ. ಮುರಲೀಧರ ರಾವ್

**ನ**ಮಗೆ ಆಗಾಗ ಎದುರಾಗುತ್ತಿರುವ ಪ್ರಶ್ನೆ ! –ಈ ನಮ್ಮ ಜಗತ್ತಿನಲ್ಲಿ ಎಂದರೆ ಸುಧಾರಣಾ ಪಕ್ಷದವರು ಮುಂದಿಟ್ಟ ಹೆಜ್ಜೆಯಲ್ಲಿ (ಅಂದರೆ ತೀವ್ರ ಸುಧಾರಣಾ ತತ್ತ್ವಗಳಿಗೆ ಅನುಸಾರ ಹೊಂದಿದ ಈ ಜಗತ್ತಿನಲ್ಲಿ) ಭರತನಾಟ್ಯವನ್ನೇ ಬದಿಗಿರಿಸಿ ನಮ್ಮ ಹೊಸ ಬುದ್ಧಿಶಕ್ತಿ ಸೃಜಿಸಿದ ಪ್ರತಿಭಾದೃಷ್ಟಿಯ ಬೆನ್ನತ್ತಿ ಹೋಗಲೋ ಎಂಬ ನಿರ್ಧಾರಕ್ಕೆ ಬಂದಿದ್ದೇವೆ. ಆದರೆ ಮನಸ್ಸು ‘ಬೇಡ’ ಅನ್ನುತ್ತದೆ.

ತಾನು ಕಲಿತಿರುವ ಹಲವು ವಿದ್ಯೆಗಳಲ್ಲಿ ಭರತನಾಟ್ಯವನ್ನು ಬಿಟ್ಟು ಬೇರೊಂದರ ಸುಸ್ವರೂಪ ನಮಗೆ ಕಾಣಿಸಲಿಲ್ಲ. ನಮ್ಮ ಕಣ್ಣಿಗೆ ನಿಜವಾದ ಒಂದು ಪ್ರತಿಮೆ ಭರತನಾಟ್ಯದಲ್ಲಿದೆ. ಇದನ್ನು ರಚಿಸುವಾಗ, ಪ್ರಯೋಗಿಸುವಾಗ ನಮ್ಮಲ್ಲಿ ಒದಗಿರುವ ಸಂತೋಷ ಬೇರೊಂದು ಕಡೆಯಲ್ಲಿ ದೊರಕದು. ನಾಟ್ಯದ ಬಲ, ಶಕ್ತಿ, ಸೌಂದರ್ಯದಲ್ಲಿ ಒಂದು ಶ್ರದ್ಧೆಯನ್ನು ಕಾಣುತ್ತೇವೆ. ಇದನ್ನು ಹೊಂದಿದ ಸಂಗೀತದ ಸಾಮರ್ಥ್ಯ, ಶಬ್ದದ ಒಂದು ಉದ್ವೇಗ, ‘ಪ್ರತಿಮೆ’ಯ ಕಲ್ಪನೆಯಲ್ಲಿ ಮುಳುಗೇಳುತ್ತಿದ್ದೇವೆ.

ಒಂದು ಕಾಲದಲ್ಲಿ ಹಳೆಯ ನೃತ್ಯಗುರುಗಳು ದೊಡ್ಡ ಮನಸ್ಸಿನಿಂದ ಹಾಗೂ ಪೂರ್ಣಾಧಿಕಾರದಿಂದ ಭರತನಾಟ್ಯದ ಮೇಲ್ದರ್ಜೆಗೆ ಒಂದು ಕೀಲಿಕೈ ಒದಗಿಸಿದ್ದಾರೆ. ಪೂರ್ಣಸುಧಾರಣೆಗಾಗಿ ತನ್ನ ಮನಸ್ಸಿನ ಒಳಗಿದ್ದ ಕಲೆಗೆ ತನ್ನತನವೆಂಬ ಒಂದು ಗುಟ್ಟನ್ನು ಹೇಳಿಕೊಟ್ಟವರಿದ್ದರು ; ತನ್ನಲ್ಲಿ ಇರಬೇಕಾದ ಧೈರ್ಯವನ್ನು ಹೆಚ್ಚಿಸಿದರು; ಅದಕ್ಕೆ ಸಲ್ಲಬೇಕಾದ ಸಾಮರ್ಥ್ಯವನ್ನೂ ಒದಗಿಸಿದರು. ಗುರುಗಳೆನಿಸಿದ್ದವರು ಆ ಕಲೆಯ ಜೀವಧಾತುವನ್ನು ಹಿಡಿದಿದ್ದು, ನಾಟ್ಯಕಲೆಯ ಸಂಗೀತ ಮತ್ತು ನೃತ್ಯದಲ್ಲಿ ಹುದುಗಿರುವಂತಹ ಆಧಾರಗಳನ್ನು ಕಟ್ಟುನಿಟ್ಟಾಗಿ ಹೇಳಿಕೊಡುತ್ತಿದ್ದರು; ಅದರ ತಳವೆಷ್ಟು ಆಳದಲ್ಲಿದೆ ಎಂಬುದನ್ನೂ ತಿಳಿಸಿದ್ದರು. ಅಂದು ಸಾದಿರ್ ಎಂದರೆ ಕಲಾರಂಗದ ಮೇಲೆ ಕಾಣಿಸುವ ಕಲೆ ಇಡೀ ಜಗತ್ತಿನಲ್ಲಿಯೇ ಅತ್ಯಂತ ಪ್ರಪೂರ್ಣ ನೃತ್ಯವಾಗಿತ್ತು. ಸುಮಾರು ಎಂಭತ್ತು ವರ್ಷಗಳ ಹಿಂದೆ ಸಂಗೀತ ಕಲಾವಿದರು ಕಂಡುಕೊಂಡಿದ್ದದು ಈ ಕಲೆಯ ಪಾರಮ್ಯವನ್ನು.

ಇವೆಲ್ಲವೂ ನಮ್ಮ ಕಲಾರಾಧನೆಯ ಹೆಜ್ಜೆ ಮತ್ತು ಬೆಳವಣಿಗೆಗೆ ಸಹಾಯಕ. ಇಂತಹ ಬೆಳವಣಿಗೆಯಿಲ್ಲದೆ ಹೋದರೆ ಕಲೆಯ ಬಗ್ಗೆ ಒಂದು ಕ್ಷುದ್ರ ಅಭಿಪ್ರಾಯ ಮೂಡುತ್ತದೆ. ನಮ್ಮ ಕಲೆಗಳು ಜೀವಂತವಾಗಿರುತ್ತದೆ. ಅದೂ ಅಲ್ಲದೆ ಅವುಗಳೆಲ್ಲ ಸಾಧಾರಣ ಜನತೆಯ ಆತ್ಮದಲ್ಲೇ ಇದೆ. ಅದನ್ನೇ ನಾವು ವಿಕಾಸವಾದವೆನ್ನುವುದು. ಭಾರತದಲ್ಲಿ ಎಲ್ಲರೂ ದೊಡ್ಡವರೇ ! ಇದು ನಮ್ಮ ನಿಜವಾದ ತತ್ತ್ವ ಜಿಜ್ಞಾಸೆ (ದರ್ಶನ) ಜೀವನ ಪದ್ಧತಿ ; ಸತ್ಯ ಹಾಗೂ ಸೌಂದರ್ಯಯುತವಾದುದು ; ನಾವೂ ಜೀವಿಸಬೇಕು, ಉಳಿದವರೂ ಹಾಗೆಯೇ ಜೀವಿಸಬೇಕು– ಎಂಬ ತತ್ತ್ವದಿಂದ, ಜನಗಳಿಗೂ ನಮ್ಮ ನಡುವೆ ಒಂದು







ತರಹದ ಸಮಾಲೋಚನಾ ಪದ್ಧತಿಯ ಜೀವನ ಮುಖ್ಯ.

ಬ್ರಿಟಿಷರ ಕಾಲದಲ್ಲಿ ಜನರಿಗೆ ಅತಿಪ್ರಿಯವಾದ ನಾಟಕಾದಿಕ್ರಿಯೆಗಳಿಂದ ದೇವದಾಸಿಯರ ನಾಟ್ಯವನ್ನು ಕಡೆಗಣಿಸಿದ್ದರು. ಅದೇ ದೇವದಾಸಿ ಪದ್ಧತಿಯಲ್ಲಿ ಅತಿಮುಖ್ಯವಾದ ಅಭಿನಯಭಾಗವೂ ಸಂಪೂರ್ಣವಾಗಿತ್ತು. ಆ ಕಲೆ ಮುಂದುವರಿಯದಂತೆ ಅದರ ಒಳತಿರುಳಿನ ಬಗೆಯಲ್ಲಿ ಹಲವು ಮಾರ್ಪಾಟುಗಳನ್ನು ಕಂಡರು. ಅಂದಿಗೂ ಬಹಳ ಮಂದಿಗೆ ಅವು ಚರ್ಚಾಸ್ಪದ ವಿಷಯವಾಗಿತ್ತು. ‘ತಾವು ಕಂಡುದೇ ಸತ್ಯ’ ಎಂದು ಬೇಡವಾದ ಅರಿವು ಅವರಿಗಿತ್ತು. ಉನ್ನತ ಮಟ್ಟದಲ್ಲಿದ್ದವರಿಗೆ ಯಾವುದೂ ಚೆನ್ನಾಗಿಲ್ಲವೆಂಬ ಪ್ರಜ್ಞೆ ಇತ್ತು. ಅವರ ಗಂಟಲಧ್ವನಿಗೆ ಎಲ್ಲರೂ ಸೋಲಬೇಕೆಂದಿತ್ತು  ಅವರ ಹಠ. ಅಲ್ಲಿಯೂ ತಮ್ಮಲ್ಲಿಯೇ ಹೆಚ್ಚು ಕಡಿಮೆ ಇದೆ ಎಂಬುದು ಅವರ ಮನಸ್ಸಿಗೆ ಹೋಗಿಲ್ಲ. ಯಾವ ಗುರುವೂ ಅವರ ನಿಲುವಿಗೆ ಸರಿಯಾದ ವ್ಯಾಯಾಮ ಕೊಡುತ್ತಿಲ್ಲವಾಗಿತ್ತು. ನಮ್ಮದು ಸರಿ ಉಳಿದದ್ದು ಅಲ್ಲ ಎಂಬ ಯೋಚನೆ ಅವರದು.



ನೃತ್ಯದಲ್ಲಿ ತಾನು ನೋಡಿದ್ದೇ ಸರಿ ಎಂಬ ಯೋಚನೆ ಬೇಡ. ಆ ಕ್ರಮ ಸರಿಯಿಲ್ಲ, ಈ ಕ್ರಮವೂ ಸರಿಯಿಲ್ಲ ಎಂಬ ಮಾತಿನ ಹರಿವು ನಿಶ್ಚಿತವಲ್ಲ. ಮನಸ್ಸಿನಲ್ಲಿ ಯಾವ ಭಾವ ಯೋಚಿಸುವುದೋ ಅದನ್ನೇ ನಮ್ಮದಾಗಿಸಬೇಕು. ಇನ್ನೊಂದನ್ನು ಕಂಡು ವೈಷಮ್ಯವನ್ನು ಮೀರಿಸಬೇಕು. ಹಿಂದಿನ ನೃತ್ಯ ಗುರುಗಳು ಅಂತಹ ಭಾವವನ್ನು ಹೊಂದಿಲ್ಲವಾದ್ದರಿಂದಲೇ ನಮಗೆ ಆ ಕಲೆ ದೊರಕಿದೆ ಅಷ್ಟೇ ! ಭರತನಾಟ್ಯ ಬದಲಾವಣೆಗಳನ್ನು ಕಂಡಿದೆ. ಬದಲಾವಣೆಯಿದ್ದರೂ ಅದರ ನಡುವೆ ವೈಯಕ್ತಿಕತೆ ಇದೆ ಎಂಬುದನ್ನು ಮರೆಯಬಾರದು.

ಇಂದು ಒಬ್ಬನ ಜೀವಿತಾವಧಿಯು ಎಷ್ಟು ಸೂಕ್ಷ್ಮವೆಂದರೆ ಇಡಿಯ ವಿಶ್ವವೇ ನಮ್ಮಿದಿರು ತೆರೆದು ನಿಂತಿದೆ. ಅಂತೆಯೇ ಜೀವನದಲ್ಲಿ ಟೆಲಿಕಮ್ಯುನಿಕೇಶನ್ ಹಾಗೂ ಮಾರ್ಕೆಟ್ಟಿನ ಲಾಭನಷ್ಟಗಳೆಲ್ಲ ಸೇರಿದ ಶಾಪಕೂಪದಲ್ಲಿ ಭಾರತೀಯ ನೃತ್ಯವೂ ದಾರಿ ಕಾಣದೆ ಒಂದೆಡೆ ನಿಂತಿದೆ. ಉತ್ತಮ ಕಲಾವಿದನಲ್ಲಿ ಇರಬೇಕಾದ ಶಕ್ತಿಯೆಲ್ಲವೂ ನಾಶವಾಗಿ ಕಲೆಯಲ್ಲಿ ಬಿರುಕು ಕಂಡುಬರುತ್ತಿದೆ. ಆದರೂ ಒಂದೆರಡು ಕಡೆಗಳಲ್ಲಿ ಬೆಳಕಿಗೆ ಬರಲು ಪ್ರಯತ್ನಿಸಿದ್ದಾರೆ ಕೆಲವರು ನರ್ತಕರು. ನಾವೂ ಈ ಸಮಸ್ಯೆಯನ್ನು ಕಣ್ಮುಚ್ಚಿಕೊಂಡು ಅರ್ಥ ಮಾಡಿಕೊಳ್ಳುವುದರಲ್ಲಿ ಅರ್ಥವೂ ಅನರ್ಥವೂ ಬೆಂಬಿಡದೆ ಬಂದಿದೆ.

ಜೀವನದಲ್ಲಿ ಒಂದು ವಿಧದ ಲಾಭವನ್ನು ಪಡೆವ ರೀತಿಯನ್ನು ಕಾಣಿಸುವಾಗ ಕೆಲವು ನೃತ್ಯಶಿಕ್ಷಕರು ಪ್ರತ್ಯಕ್ಷರಾಗಿದ್ದಾರೆ. ನೃತ್ಯಗುರುಗಳು ಲಾಭದ ದೃಷ್ಟಿಯಲ್ಲಿ ತಮ್ಮ ಕಲೆಯನ್ನು ಮಾರಾಟಕ್ಕೆ ಇಟ್ಟಂತೆ ಕಾಣುವ ಸಂದರ್ಭವಿದೆ. ಭರತನಾಟ್ಯವನ್ನು ಅದಲು ಬದಲು ಮಾಡಿರುವುದು ಒಂದು ‘ಅಪರೂಪ’ವೇ ಹೌದು ! ಇವರ ಬಳಿಯಲ್ಲಿ ಕಲಿಯಲು ಬಂದ ಬಾಲಕರು ಬೇರೆ ಏನನ್ನು ಕಲಿಯಬೇಕು? ಈ ಗುರುಗಳು ವ್ಯಾಪಾರಸ್ಥರೆನ್ನಬೇಕೆ?

–19ನೇ ಪುಟಕ್ಕೆ

**ಕಳೆದ ಸಂಚಿಕೆಗಳಲ್ಲಿ ಧಾರವಾಡದ**
**ಆಕಾಶವಾಣಿ ಉದ್ಯೋಗಿ ದಿವಾಕರ ಹೆಗಡೆ ರಚಿತ**
**ಗಿರಿಜಾ ಕಲ್ಯಾಣ, ಮೇನಕೆಯ ಮಗಳು ರೂಪಕದ**
**ಲಯ–ಗತಿಗಳ ಸೊಬಗನ್ನು ಕಂಡಿದ್ದೀರಿ. ಈ ಸಂಚಿಕೆಯಲ್ಲಿ**
**ಅವರಿಂದ ರಚಿತಗೊಂಡ ಮತ್ತೊಂದು ರೂಪಕ**

# ವಿಶ್ವ ಗೋಪಾಲ

**( ಈ ರೀತಿಯ ಕಾವ್ಯ– ರಚನೆ–ಕವನಗಳಿದ್ದರೆ ಲೇಖಕರು ಕಳಿಸಬಹುದು.)**

## ಗಣಪತಿ ಪೂಜೆ

ಮೈಯ ಮಣ್ಣಿನ ಗೊಂಬೆ ಅಯ್ಯ ನಾ ಬಲಗೊಂಬೆ
ಅಮ್ಮನು ಜಗದಂಬೆ ಮಗ ನೀ ಮೋದಕ ತಿಂಬೆ
ಅಪ್ಪತಾಂಡವದಲ್ಲಿ ಅಮ್ಮ ಸಂಗಡದಲ್ಲಿ
ನಿಮ್ಮ ಚೆಂದದ ಕುಣಿತ ನಮ್ಮ ಕಾಯಲಿ ಗಣಪ
ಆನೆ ಸೊಂಡಿಲನೆತ್ತಿ ಇಲಿಯ ಬೆನ್ನನ್ನು ಹತ್ತಿ
ನೀ ನಮ್ಮ ಗಣಪತಿ ನೀಡೀಗ ಶುಭಮತಿ
ಕಾಲಿಗೆ ಕಿರು ಗೆಜ್ಜೆ ಕಾಲಕ್ಕೆ ಹೊಸ ಹೆಜ್ಜೆ
ಮೇಳ ಮೇಳನ ಬಿಜ್ಜೆ ಹೇಳಪ್ಪ ಹೊಸ ಪಜ್ಜೆ
ಸಣ್ಣಕಣ್ಣಿನ ದೇವ ಬಿನ್ನಣೆಯಲಿ ಕಾವ
ಬಣ್ಣ ತುಂಬಿದ ಭಾವ ಹಣ್ಣಾಗಲೀ ಜೀವ

*******


**ಗೋಪ ಗೋಪಿಯರು (ಕೋಲಾಟ):** ಆಟವೆಂದರು ಕೃಷ್ಣ ಊಟವೆಂದರು ಕೃಷ್ಣ
ಮಾಟಾದ ಮಳೆಬಿಲ್ಲ ನೋಟವೆಂದರು ಕೃಷ್ಣ
ಹೂಟವೆಂದರು ಕೃಷ್ಣ ಬೇಟವೆಂದರು ಕೃಷ್ಣ
ಕೂಟದೊಳಗೆ ರಸದೂಟವೆಂದರು ಕೃಷ್ಣ

ಕಳ್ಳ ಕತ್ತಲೆ ಕೃಷ್ಣ ಬೆಳ್ಳಂ ಬೆಳಗು ಕೃಷ್ಣ
ಮಳ್ಳ ಕಾಲವ ಹಿಂದೆ ತಳ್ಳಿದ ಕೃಷ್ಣ
ಸುಳ್ಳೆ ಕಾಡುವ ಕೃಷ್ಣ ಮಳ್ಳ ಮಾಡುವ ಕೃಷ್ಣ
ಬಳ್ಳ ಪ್ರೀತಿಯ ಬಾಚಿ ನೆಳ್ಳ ನೀಡುವ ಕೃಷ್ಣ









ಗೋಪಿಯ ಮನ ಕೃಷ್ಣ ಗೋಪರ ಧನ ಕೃಷ್ಣ
ಪಾಪ ಪುಣ್ಯಗಳಾಚೆ ನೀನೇ ಕೃಷ್ಣ
ಲೇಪವಿಲ್ಲದ ಕೃಷ್ಣ ತಾಪವಿಲ್ಲದ ಕೃಷ್ಣ
ಕಾಪಿಡುವ ಸರಸ ಸಲ್ಲಾಪದಿ ಕೃಷ್ಣ.

**ಕೃಷ್ಣನ ಪ್ರವೇಶ:** ಬಾಲ ಬಂದ । ಗೋ । ಪಾಲ ಬಂದ ॥
ಆಲದೆಲೆಯ ಮೇಲೆ ಮಲಗಿ ನಲಿವನು ಬಂದ ।
ಕಾಲದಾಚೆಗೆ ನಿಂತು ಹೊಳೆವ ಮೂಲನೆ ಬಂದ ।
ದನವ ಕಾಯುವ ಸಿರಿ ಲೋಲ ಶ್ರೀ ಹರಿ ಬಂದ ।
ಮನವ ಗೆಲ್ಲುವ ಜನದರಸ ನಂದನ ಕಂದ ।

ತುಂಗೆ ಕರುವ ಗಂಗೆದೊಗಲ ನೇವರಿಸುವನು
ರಂಗ ತಾನೆ ಹೆಸರ ಹಿಡಿದು ಬಳಿಗೆ ಕರೆವನು
ಯಮುನೆ ಬಾರೆ ಗೌರಿ ಬಾರೆ ಬಾರೆ ಶಾರದೆ
ಕಾಮಧೇನು ಕೌಲೆ ಬಾರೆ ಬಾರೆ ವರದೆಯೆ

ನೀನು ಹಸಿರು ಹುಲ್ಲ ತಿನ್ನು ವತ್ಸ ತಾಯ ಹಾಲನುಣ್ಣು
ನಾನು ನೀರ ತೋರಲೇನು ನಿನ್ನ ಮೈಯ ತಿಕ್ಕಲೇನು
ಮಣ್ಣು ಮೈಗೆ ಮೆತ್ತಿತೇನು ತಣ್ಣ ಗಾಳಿಚುಚ್ಚಿತೇನು
ಉಣ್ಣೆ ರಕ್ತ ಹೀರಿತೇನು ಕಾಡ ಮುಳ್ಳು ಕಚ್ಚಿತೇನು

**ಕೃಷ್ಣ:** ಗೆಳೆಯರೆ ಬನ್ನಿರಿ ಎಳೆಯರೆ ಬನ್ನಿರಿ
ಗೋವನು ಕಾಯೋಣ ॥
ನಲಿಯುತ ಬನ್ನಿರಿ ಒಲಿಯುತ ಬನ್ನಿರಿ
ಆವನು ಕಾಯೋಣ॥
ಗಿರಿಯ ಹತ್ತಿ ಆ ಬೆಟ್ಟ ಸುತ್ತಿ ಈ
ಹಸುವನು ಕಾಯೋಣ ॥
ಧರೆಯ ಬುತ್ತಿ ಪಾವನದ ವೃತ್ತಿ ನಾ
ವಾಕಳ ಕಾಯೋಣ॥

ಕೃಷಿಯಾದರು ಗೋವು ಹಸಿವಾದರು ಗೋವು
ಜಸವ ನೀಡುವ ದೇವಿ ಕಾಮಧೇನು
ನೊಸಲ ಭಸ್ಮವು ಗೋವು ಮೊಸರು ತುಪ್ಪವು ಗೋವು
ಹಸಿ ಹುಲ್ಲ ರಸದಲ್ಲಿ ಜೀವ ಜೇನ ॥ 1 ॥

ದೇವತೆಗಳಾವಾಸ ಭಾವಶ್ರದ್ಧೆಯ ಸ್ರೋತ
ಯಾವಾಗಲು ನಮ್ಮ ಕಾವ ಆವೇ
ಜೀವ ಸಂಕುಲದೀವೆ ಪಾವನ ಪದವೀವೆ
ನೋವ ಕಳೆದು ಹೊಸ ಸೊಗವನೀವೆ ॥ 2॥

ಹಾಲೆಂಬ ಅಮೃತವೆ ಆಲದಂತಹ ನೆರಳೆ
ಮೇಲಾದ ಪಂಚಾಮೃತ ಭವ್ಯರಸವೆ
ಬಾಲವೃದ್ಧರ ತಾಯೆ ಕಾಲದಾಚೆಯ ಮಾಯೆ
ಲಾಲನದಲಿ ಪಂಚಗವ್ಯದ ಕಸುವೆ॥ 3 ॥

## ವತ್ಸಾಸುರ ವಧೆ

**ಗೋಪರು:** ನೋಡು ಕೃಷ್ಣ ಹೋರಿಯೊಂದು ನೆಗೆವ ರಭಸವ
ಓಡಿ ಕುಣಿವ ದೂಡಿ ಬಡಿವ ಹೊಸ ರಹಸ್ಯವ
ಬೇಡ ಬೇಡ ಕಾಡಬಹುದು ಇದು ವಿಚಿತ್ರವು
ಗೂಢವಾಯ್ತು ಪೀಡೆಯಾಯ್ತು ವತ್ಸ ರೂಪವು
**ಕೃಷ್ಣ:** ಬೆದರದಿರಿ ಓಡಿ ಬಹ ಕರುವ ಹಿಡಿಯುವೆನೀಗ ।
ಕದಲದಿರಿ ಪೀಡೆಯನು ತಡೆದು ನೋಡುವೆನೀಗ ॥
ಕೆದರಿ ಕಾಲೆತ್ತಿ ಹೂಂಕರಿಸುತಿಹ ಹೋರಿಯನು ।
ಎದುರಿಸಿದ ಕೃಷ್ಣ ತಾನೆತ್ತಿ ಧರೆಗೆಸೆದ ॥
**ಗೋಪರು:** ಆಟವೆಂದರು ಕೃಷ್ಣ ಊಟವೆಂದರು ಕೃಷ್ಣ
ಮಾಟಾದ ಮಳೆಬಿಲ್ಲ ನೋಟವೆಂದರು ಕೃಷ್ಣ

## ಕೃಷ್ಣಲೀಲೆ

**ಗೋಪಿಯರು:** ಕಾಸಿದ ಹಾಲೇ ಕಾಣದು ಮನೆಯಲಿ ಕುಡಿದವರಾರದನು ।
ಕಾಸದ ಬೆಣ್ಣೆಯ ಮೀಸಲ ಮುರಿದರು ತಿಂದವರಾರದನು ।
ಮೋಸದೊಳಗೆ ಒಳನುಗ್ಗಿದ ಚೋರನ ಹಿಡಿಯಲುಬೇಕವನ ।
ಸಾಸಿರನಾಮದ ಯಶೋದೆ ಕಂದನ ನೆನೆಯುವದೇಕೆ ಮನ ।

**ಗೋಪಿಯರು:** ಕೊಳಲ ಗಾನ ಕೇಳುತಿಹುದು ಯಮುನೆ ತಟದಲಿ
ಮಳಲ ತಡಿಯ ರಾಸವಿಹುದು ಬೃಂದಾವನದಲಿ
ಕೋದ ತುಳಸಿ ಬಾಡದಂತೆ ಹೇಗೆ ಆಡುವ
ಹಾದಿಯಲ್ಲಿ ಅಡ್ಡಗಟ್ಟಿ ಯಾಕೆ ಕಾಡುವ
ಬಾಲೆ ಕೇಳು ನಾನು ನೀನು ಆಕಳಾಗುವ ।
ಲೀಲೆಯಿಂದಲೋಡಿ ಬಂದು ನಮ್ಮ ಕಾಯುವ ।







ಕೇಳಿಯಲ್ಲಿ ಕರಿಯನೊಡನೆ ಎಂಥ ಸೊಗಸಿದೆ ।
ಮೇಳದಲ್ಲಿ ಮೈಯು ಮನಸು ಏಕವಾಗಿದೆ ।

ರಾಧೆಯೊಳಾಡುವ ನಮ್ಮನು ಕಾಡುವ ಜಾರನು ಈ ಕೃಷ್ಣ
ಕಾದಲನಾದನು ಮೋದದಿ ನೋಡನು ಚೋರನು ಈ ಕೃಷ್ಣ
ಬಾಧೆಯ ತಾಳೆನು ಭೇದವ ತಾಳೆನು ಕರೆವೆನು ಬಾ ಕೃಷ್ಣ
ಕಾದರು ಬಾರನು ಚಾದಗೆಯಾದೆನು ಹೋದೆಯ ಏ ಕೃಷ್ಣ

ಯಮುನೆಯ ಮಡಿಲಲಿ ನೀರಾಡಲು ತಾ ಕರೆದನು ಗೋವಿಂದ ।
ರಮಣಿಯರಾನನಕುದಕವ ಚೆಲ್ಲುವ ಓಕುಳಿ ಏನಂದ ।
ಕಮನೀಯನು ಕುಣಿದಾಡುತ ವಾರಿಯ ಸೋಕುವುದೇ ಚೆಂದ ।
ರಮಣೀಯವು ನಾರಿಯರೊಡನಾಟವು ಬೃಂದಾವನದಂದ ।

ನೀರಾಟಕಿಳಿದವರು ನಾಚಿನೀರಾಗಿಹರು ।
ಸೀರೆ ಕಾಣದು ಇಟ್ಟ ತಾವಿನಲ್ಲಿ ॥
ಮಾರಜನಕನೆ ಕೇಳು ನೀಡೆಮ್ಮ ಸೀರೆಯನು ।
ನೂರು ನಮನವು ಕೃಷ್ಣ ನಿನ್ನ ದಮ್ಮಯ್ಯ ॥

ನಾರಿಯರೆ ನಾಚದಿರಿ ಸೀರೆ ನೀಡುವ ನಿಮವೆ ।
ಸಾರಿದಡದಲಿ ನಿಂತು ಮೇಲೆ ಕೈ ನೀಡಿ ।
ಜಾರ ನೀನೆಂಥವನು ಮರ್ಯಾದೆಯನು ಕಳೆವೆ ।
ಚೋರತನಕೊಂದಿಷ್ಟು ಮಿತಿ ಬೇಡವೆ ॥

ಮೈದೊಗಲ ಮರ್ಯಾದೆಗೇನರ್ಥವಿದೆ ಹೇಳಿ ।
ಕೈಯೆತ್ತಿ ಕೇಳುವುದು ಮುಗ್ಧ ಭಕ್ತಿಯಲಿ ॥
ಸೈಯೆಂದರೊಲಿದು ನಾರಿಯರು ಬೇಡಿದರಾಗ ।
ಜೈ ವಾಸುದೇವ ಶ್ರೀ ಹರಿಯೆ ಗೋವಿಂದ ॥
ಆಟವೆಂದರು ಕೃಷ್ಣ ಊಟವೆಂದರು ಕೃಷ್ಣ
ಮಾಟಾದ ಮಳೆಬಿಲ್ಲ ನೋಟವೆಂದರು ಕೃಷ್ಣ

## ಕಾಲೀಯ ವಧೆ

**ಗೋಪರು:** ಘೋರ ಕಾಲಿಯ ತನ್ನ ವಿಷದಲಿ ।
ವಾರಿಧಿಯ ಮಡುವನ್ನು ಕೆಡಿಸಿದ ।
ನೀರ ಕೆಡಿಸಿದ ಗೋವ ಕೊಲ್ಲುವ । ಸಾರಿ ನೋಡಿಗ ॥
**ಕೃಷ್ಣ:** ನೀರಲಿ ಧುಮುಕಿದ ಮಡುವಲಿ ಹುಡುಕಿದ ।
ಹಾವನು ಹಿಡಿದೆಳೆದ ॥
ಕಾರುವ ವಿಷ ವೈಷಮ್ಯದ ಹೆಡೆಯನು ।
ಮೆಟ್ಟುತ ಹರಿ ಕುಣಿದ ॥
**ಭಾಮಿನಿ:** ಕರಿಯ ನೀ ಸಾಮನ್ಯನಲ್ಲವೊ ।
ಬರಿಯ ಗೋವಳನಲ್ಲ ಹೆಮ್ಮೆಯ ।
ಕಿರಿಯ ನೀನಾರೆಂದೆನುತಲರುಹುವುದು ಪೊರೆಯುವುದು ॥

**ಮತ್ಸ್ಯ:** ಆದಿಯೊಳಗೆ ಅವರಿಸಿದ ನೀರಿಗೆ ತೇಲಿದ ಶಿಶು ನಾನು
ವೇದವನೆತ್ತಿದ ಮೊದಲವತಾರದ ಮತ್ಸ್ಯನಿಹೆನು ನಾನು

**ಕೂರ್ಮ:** ವಾರಿಧಿ ಮಥಿಸಿದ ಮೇರು ಪರ್ವತದ ಭಾರಕೆ ಬೆನ್ನಿತ್ತೆ
ಸೇರಿದ ದೈತ್ಯಾದಿತ್ಯರು ಕಡೆಯಲು ಕೂರ್ಮನಾಗಿ ನಿತ್ತೆ
ಮೀರಿದ ಮೋಹಿನಿ ವೇಷದಿ ಅಮೃತ ದಿವಿಜರ ಕೈಗಿತ್ತೆ
ಏರುವ ಮತ್ತಿನ ಸಾರವ ತೆಗೆದಾ ದೈತ್ಯರ ಬಣಕಿತ್ತೆ

**ವರಾಹ:** ಘೋರ ಹಿರಣ್ಯಾಕ ಗಾಬರಿಗೆಡಿಸಿದ ವಸುಧೆಯ ತಾನೊದ್ದು
ಕೋರಿದೊಡನೆ ಭೂದೇವಿಯನೆತ್ತಿದೆ ಸೂಕರನಾಗಿದ್ದು
**ನಾರಸಿಂಹ:** ಕಾಡಿದನು ವಸುಮತಿಯನಂದಾ ಹಿರಣ್ಯಕಶ್ಯಪನು ।
ರೂಢಿಸಿದ ಕಂಬವನು ಒಡೆದು ಮೈ ದೋರಿದೆನು ।
ಕೇಡಿಗನ ಬಡಿದು ಬಗೆದವನ ಸಂಹರಿಸಿದೆನು ।
ಬೇಡಿದವ ಪ್ರಹ್ಲಾದ ನಾ ನಾರಸಿಂಹ ॥

**ವಾಮನ:**ಬಲಿಯ ನೊಲಿದು ಬೇಡಿ ಬಂದ ಕಿರಿಯ ವಾಮನ ।
ಸಲುವ ದಾನ ಬೆಳೆದು ನಿಂದ ಆ ತ್ರಿವಿಕ್ರಮ ।
ವ್ಯೊಮಪಾದ ಭೂಮಿಪಾದ ಬಲಿಯ ಮೆಟ್ಟಿದೆ ।
ಭೂಮ ಮೆರೆದು ವಸುಂಧರೆಯನಂದು ಕಾದಿಹೆ ॥
**ಪರಶುರಾಮ:** ಪರಶುಧರನಾಗಿರ್ದೆ ಕ್ಷತ್ರಕುಲ ಸೂದನಕೆ ।
ಧರೆಯಾಳ್ವ ದುಷ್ಟರನು ಸದೆದು ಮರೆದಿರ್ದೆ ॥







ಹತ್ತೆರಡು ಮೊತ್ತೊಂದು ಬಾರಿ ಭೂಮಿಯ ಸುತ್ತಿ ।
ಮತ್ತರನು ಕಡಿದು ಮೇದಿನಿಯ ಕಾದೆ ॥

**ರಾಮ:** ದಶರಥನಣುಗನು ತ್ರೇತಾಯುಗದಲಿ ದಶಶಿರ ನಿಗ್ರಹಕೆ
ಪೊಸತೆನಿಸಿತು ಮಾನುಷ ಜನ್ಮದ ಪರಿ ಭಕ್ತರನುಗ್ರಹಕೆ
ಭರತನ ಬಂಧುತ್ವಕೆ ಮನಸೋತೆನು ಪಾದುಕೆಗಳನಿತ್ತೆ
ದೊರೆತನದಲಿ ಧಾರಿಣಿಯನು ರಂಜಿಸಿ ಆದರ್ಶವನಿತ್ತೆ

**ಕೃಷ್ಣ:** ಇಳೆಯ ಮೊರೆಗೆ ಇಳಿದು ಬರುವೆ ಧರೆಯೆ ಕಾಮಧೇನು ।
ಕಳೆದು ಕಷ್ಟ ಬೆಳೆದು ಹರ್ಷ ಕುಣಿವ ನಮ್ಮದೇನು ।
ದೇವನಲ್ಲ ಭಾವ ಹಿರಿದು ಕಾವ ಗೋವ ನಾವು ।
ಸೇವೆಯಲ್ಲಿ ಜೀವವೊಲಿದರಾವ ನಲಿವು ನೋವು ॥

ಆಟವೆಂದರು ಕೃಷ್ಣ ಊಟವೆಂದರು ಕೃಷ್ಣ
ಮಾಟಾದ ಮಳೆಬಿಲ್ಲ ನೋಟವೆಂದರು ಕೃಷ್ಣ ॥



# ಹಸ್ತ ಮಯೂರಿ

## ಚತುರ ಹಸ್ತ



**ಲಕ್ಷಣ: ತೋರು, ಮಧ್ಯಮ ಮತ್ತು ಉಂಗುರ ಬೆರಳುಗಳನ್ನು ಜೋಡಿಸಿ ಕಿರುಬೆರಳನ್ನು ಹೊರಕ್ಕೆ ಚಾಚಿ ಹೆಬ್ಬೆರಳ ತುದಿಯನ್ನು ಉಂಗುರ ಬೆರಳಿನ ಮೂಲದಲ್ಲಿ ಮುಟ್ಟಿಸಿ ಹಿಡಿಯುವುದು. ಚತುರ ಎಂದರೆ ಚಾತುರ್ಯವುಳ್ಳವನು ಎಂದರ್ಥ. ಚಾತು0ರ್ಯವನ್ನು ಸೂಚಿಸುವುದರಿಂದ ಅಥವಾ ನಾಲ್ಕು ಬೆರಳುಗಳ ಸಂಯೋಗವಿರುವುದರಿಂದ ಈ ಹೆಸರು ಬಂದಿರಬಹುದು. ಹಸ್ತ ಮುಕ್ತಾವಳಿ, ನಾಟ್ಯಶಾಸ್ತ್ರದ ಲಕ್ಷಣದಲ್ಲಿ ಕೊಂಚ ಭಿನ್ನತೆಯಿದ್ದು ಹೆಬ್ಬೆರಳನ್ನು ಮಧ್ಯಬೆರಳಿನ ಅಡಿಗೆ ಬರುವಂತೆ ಮುಟ್ಟಿಸಲಾಗುವುದು.**

**ಗರುಡನು ಅಮೃತವನ್ನು ಕದಿಯುವಾಗ ಕಶ್ಯಪನು ದಾರಿ ತೋರಿಸಿದ್ದು ಇದೇ ಹಸ್ತದಿಂದ. ಮಿಶ್ರ ವರ್ಣ, ನಾನಾ ಬಣ್ಣ, ಋಷಿ : ವಾಲಖಿಲ್ಯ, ಅಧಿದೇವತೆ : ವೈನತೇಯ. ಇದು ಪುರುಷ ಹಸ್ತ ಪ್ರಕಾರಕ್ಕೆ ಸೇರಿದುದಾಗಿದೆ. ವಿಕ್ಷಿಪ್ತಾಕ್ಷಿಪ್ತ ಮುಂತಾದ ಕರಣಗಳಲ್ಲಿ ಈ ಹಸ್ತದ ಬಳಕೆಯಿದೆ.**



**ಕಥಕ್‌ನಲ್ಲಿ ಈ ಹಸ್ತ ಸ್ವಾಭಾವಿಕ ಹಸ್ತ ಪ್ರಕಾರಕ್ಕೆ ಸೇರಿದ್ದು. ಮಣಿಪುರಿ ನೃತ್ಯದಲ್ಲೂ ಈ ಹಸ್ತದ ಬಳಕೆ ಇದ್ದು ; ಕಥಕಳಿಯಲ್ಲಿ ಪಲ್ಲವ ಎಂಬ ಹೆಸರಿನಿಂದ ಚಾಲ್ತಿಯಲ್ಲಿದೆ.**

**'ಆವಾಹಿತೋಭವ' – ಪೂಜಾ ವಿಧಿಗಳಲ್ಲಿ ಪ್ರಸ್ತಾಪವಾಗುವ 'ಆವಾಹನಾಮುದ್ರಾ' ಚತುರ ಹಸ್ತವೇ ಆಗಿದೆ. ಈ ಮುದ್ರೆ0ಯು ಎರಡು ಅಂಗೈಗಳ ಕಿರುಬೆರಳ, ಪಾರ್ಶ್ವಗಳೆರಡರ ಕೂಡುವಿಕೆಯಿಂದಾದ ಸಂಯುತ ಮುದ್ರೆ. ಇದು ಚತುರ ಹಸ್ತಗಳೆರಡರ ಸೇರುವಿಕೆಯಿಂದಾಗಿದ್ದು, ಇಲ್ಲಿ ಈ ಎರಡೂ ಚತುರಶ್ರಗಳ ಅಂಗೈ ಮೇಲ್ಮುಖವಾಗಿ ಹಿಡಿಯಲ್ಪಡುತ್ತದೆ.**

**ಯೋಗಚಿಕಿತ್ಸಾ ಮುದ್ರೆಗಳಲ್ಲಿ ಕಂಡುಬರುವ ಆದಿತಿ ಮುದ್ರೆ ಚತುರ ಹಸ್ತವೇ ಅಗಿದೆ. ಆದರೆ ಉಳಿದ ಬೆರಳುಗಳನ್ನು ನೇರವಾಗಿಡಬೇಕು. ಇದನ್ನು ಪತಾಕ ಚತುರವೆಂದು ಕರೆಯುವ ಕ್ರಮವಿದೆ. ಈ ಮುದ್ರೆಯ ಉಪಯೋಗ ಬೆಳಗ್ಗಿನ ಸೀನು ನಿವಾರಣೆಗೆ, ದೇಹದ ಉಷ್ಣತೆಗೆ, ಆಕಳಿಕೆ ನಿವಾರಣೆಯಾಗಿ ಶಕ್ತಿ ಸಂಚಯಕ್ಕೆ ಸಹಕಾರಿ.**

**ವಿನಿಯೋಗ :** ಕಸ್ತೂರಿ, ಸ್ವಲ್ಪ ಎಂಬ ಅರ್ಥ, ಚಿನ್ನ, ತಾಮ್ರ ಮುಂತಾದ ಲೋಹಗಳು, ಕಣ್ಣು ಒದ್ದೆ0ಯಾಗಿರುವುದು, ದು:ಖ, ಖೇದ, ರಸಸ್ವಾದನೆ, ಕಣ್ಣು, ಜಾತಿಭೇದಗಳು, ಪ್ರಮಾಣ ಮಾಡುವುದು, ಸಂತೋಷವಾಗಿರುವುದು, ಸರಸ, ನಿಧಾನ ನಡಿಗೆ, ತುಂಡರಿಸುವುದು, ಆಸನ, ತುಪ್ಪ ಮತ್ತು ಎಣ್ಣೆಯನ್ನು ತೋರಿಸುವುದು, ಚಿಕ್ಕತುಂಡುಗಳನ್ನು ಮಾಡುವುದು, ಮುಖ.

**ಇತರೇ ವಿನಿಯೋಗ :** ವಿನಯ, ನಿಯಮ, ಚಾತುರ್ಯ, ಬಾಲಕ, ರೋಗಿ, ಸತ್ವ, ವಂಚನೆ ಮಾಡುವುದು, ಯೋಗ್ಯ, ಏಕಾಗ್ರತೆ, ಹಿತಕರ, ಸತ್ಯ, ಪಥ್ಯ, ಧೂಳು, ಗೋರೋಚನ,







ಏಕಾಗ್ರತೆ, ಕರ್ಪೂರ, ಗಲ್ಲ, ಮುಖ, ಹಣೆ, ಪಕ್ಕಕ್ಕೆ ದೀರ್ಘ ನೋಟ, ಪ್ರೇಮಿ, ನಯ, ನೀತಿ, ಕನ್ನಡಿ, ಕೆನ್ನೆ, ಕರ್ಣಪತ್ರ, ವಜ್ರ, ಪಚ್ಚೆರತ್ನ, 'ಸಾಕು, ಇಷ್ಟೇ' ಎನ್ನಲು, ಸಮತೋಲಿತ ಭಾವ, ಮಿಶ್ರ ಜಾತಿ, ಕಸ್ತೂರಿ, ಲೇಪನ, ಪೀಠ, ಚೂರು, ಕಟಾಕ್ಷ, ಚಾಟೂಕ್ತಿ, ಬುದ್ಧಿ ಹೇಳುವುದು, ಮೃದುಮಾತು, ತಲೆಗೆ ಎಣ್ಣೆ ಹಚ್ಚುವುದು, ನೆಕ್ಕುವುದು, ವಿಚಾರ, ಲಜ್ಜೆ, ಊಹಾಪೋಹ, ದಾಳ ಬಿಡುವುದು, ಮಾರ್ದವ, ಸಕ್ಕರೆ, ತಿಳಿವಳಿಕೆ, ಕರ್ಣಕುಂಡಲ, ತಪಸ್ಸು, ಕ್ರಮ, ಉಚಿತ ವಾಕ್ಕು, ಅವಮಾನ, ಚಲನೆ, ನಂಬಿಕೆದ್ರೋಹ, ನಾಭಿ, ಆಟಗಳು, ಪ್ರೀತಿ, ಪ್ರತಿಭೆ, ತೀರ್ಪು, ಕೋಪ, ಚಿಂತೆ, ಕ್ಷಮೆ, ಬುದ್ಧಿವಂತಿಕೆ, ಸೋಲು, ಮೈಥುನ, ಮನೆ, ಪತ್ನಿ, ಬಣ್ಣ– ಕೆಂಪು, ಹಳದಿ, ಬಿಳುಪು, ನೀಲಿ, ನೀಲ–ಶ್ವೇತ, ಹುಲ್ಲುಗಾವಲು, ಖಡ್ಗ, ಗುಣ–ಅಗುಣ, ಯುಕ್ತಿ, ವೇಷ, ವಾರ್ತೆ, ಪ್ರಶ್ನೆ, ಸುಖ, ಶೀಲ, ಪ್ರಣಯದ ಸಂಜ್ಞೆ, ದಾಕ್ಷಿಣ್ಯ, ಆಟ, ಪ್ರೇಮ, ಶುದ್ಧತೆ, ಜಾಣತನ, ಮಾಧು0ರ್ಯ, ಸಂದೇಹ, ಅನುಕೂಲ, ಮೆತ್ತಗೆ, ವಿಚಾರ, ವಾತ್ಸಲ್ಯ, ಆಶೆ, ಸ್ಮೃತಿ, ಸಂತೋಷ, ಉತ್ತಮ ನಡತೆ, ಪ್ರಶ್ನೆ, ಇಲ್ಲದಿರುವುದು, ಜೀವನ/ಉದ್ಯೋಗ, ಯೋಗ್ಯತೆ, ಉಡುಪು, ಹುಲ್ಲು, ಚಿಕ್ಕ ಪಾಲು, ಏಳ್ಗೆ–ಬೀಳ್ಗೆ, ಯೌವನ, ಶ್ರೀಮಂತಿಕೆ, ಮನೆಗಳು, ಹೆಂಡತಿಯರು, ಹಲವು ಬಣ್ಣಗಳು, ಸೋಲು ಇತ್ಯಾದಿಗಳ ಸಂವಹನ ಕಾರ್ಯಕ್ಕೆ ಬಳಸಲ್ಪಡುತ್ತದೆ.



ಸುರತ, ಸತ್ಯ, ಅನೃತ, ನಮಸ್ಕಾರ, ಯಶಸ್ಸು, ಆಭರಣ, ತೀರ್ಪು, ವಿಚಾರ, ಸ್ಮರಣೆ, ಕ್ಷಮೆ, ವಿಹಾರೋದ್ಯಾನ, ಸಿಂಧೂರ, ವಿಧಾರಣೆ, ಕೀರ್ತಿ, ಕಣ್ಣು, ಗುಣ, ಮೇಲ್ತುಟಿ, ಕೆಳತುಟಿ, ಕಿವಿ, ಚಾರಿತ್ರ್ಯ, ಲಲಿತ, ವಿವಾದ, ಗುಣ, ದಾಕ್ಷಿಣ್ಯ, ನಿಯಮ, ವಾರ್ತೆ, ಸಂಪತ್ತಿಲ್ಲದಿರುವಿಕೆ, ಬೆಳವಣಿಗೆ, ಭಕ್ಷಣೆ, ಲಜ್ಜೆ, ಪೌಷ್ಟಿಕತೆ, ದೋಷ, ತೆಂಗಿನ ಗರಿ, ಅರಣ್ಯ, ನಂಬಿಕೆ, ಸಂದೇಹ, ಸಣ್ಣ ವಸ್ತು, ವೇದಶ್ರೋತ್ರಿ, ಚಾತುರ್ಯತೆ, ಅಡಕೆ, ಸವಿಯಾದದ್ದು, ಮೃದುತ್ವ, ಶುದ್ಧತೆ, ಉಪ್ಪು, ಮೀನು, ಬಕಪಕ್ಷಿ ಮತ್ತು ಇನ್ನಿತರ ಪಕ್ಷಿ, ಬಸವನ ಹುಳು, ತ್ರೇತಾಯುಗ, ಅಗ್ರಹಾಯಣ ಮಾಸ, ಉಡುಗೊರೆ, ಸಪ್ತ ಸಮುದ್ರ, ಕಪ್ಪೆಚಿಪ್ಪು, ಈಜುಕೊಳ, ಬಾವಿ, ಕೂಪ, ಬಿಲ್ಲು, ಇಂದ್ರ, ಜಿಂಕೆಯ ಮುಖ, ಬೇಟೆ, ಧ್ಯಾನ, ಲಯ, ವಿನಯ, ಯುಕ್ತಿ, ನಿಪುಣತ್ವ, ಆತುರ, ಪಥ್ಯ, ಮಧ್ಯೆ, ಅಶುಚಿ, ರುಚಿಯಾದದ್ದು, ಉತ್ಸವ, ಅಳು, ಆಲಿಸು, ವ್ಯಾಖ್ಯೆ, ಹೆಸರು, ಹೊದಿಕೆ, ಉಪಾಯ, ವಿವಿಧತೆ, ಸುಲಭ, ಅಪೂರ್ವ, ಅಪರೂಪ, ಗಾಯಗೊಂಡಿರುವುದು, ಶೇಖರಿಸುವುದು, ಮಕ್ಕಳಿಗೆ ಹೊಡೆಯುವುದು, ಉಗ್ರಾಣ, ಮನಸ್ಸು, ಪ್ರಣಯ, ದುರ್ಲಭ, ಆಶಯ, ಪ್ರಶ್ನೆ, ಸಂಘಟನೆ, ನಿದ್ರೆ, ಮೃದು, ನೀಲ–ಹಲದಿ–ಬಿಳಿ–ಕೆಂಪು ವರ್ಣಗಳು, ಮೆಲ್ಲಗೆ ಉಜ್ಜುವುದು, ಕುಡಿಯುವಂತಹ ತಿನ್ನುವಂತಹ ವಸ್ತು, 'ಏನು ಮಾಡುವುದು' ಎನ್ನಲು, ತಾವರೆಯ ದಳ, ಸ್ಮಶಾನ, ಟೊಂಗೆ, ಬಿಲ್ವ ಮರ, ಸಣ್ಣ ಮರಗಳು, ಛತ್ರಿ, ವಸ್ತ್ರ, ತಾಳ್ಮೆ, ವಸ್ತು, ಕೊಳ, ಸಿಂಹ, ವಿಮಾನ, ಸರಸ್ವತಿ, ಮರ್ತ್ಯ ಮಹೋತ್ಸವ, ಕುದುರೆ, ವಿಶೇಷವಾದ ನೀರು, ಹಕ್ಕಿಗಳ ಹಾರಾಟದ ವೇಗ, ತಪಸ್ಸು, ಸಪ್ತ ಸಮುದ್ರದ ತೀರ, ವಿರಹ, ಬೇರ್ಪಡುವುದು, ವಿಧಾತ,

ಯೌವನ, ಮನೆ, ಒಲವು ಇತ್ಯಾದಿಗಳನ್ನು ಸಂವಹಿಸಲು ಉಪಯೋಗವಾಗುತ್ತದೆ.

**ಸಂಕರ ಹಸ್ತ** ವಿಭಾಗದಲ್ಲಿ ಚತುರವನ್ನು ಅಭಿಮುಖವಾಗಿ ಹಿಡಿದರೆ ಬ್ರಾಹ್ಮಣವೆಂದೂ, ನಾನಾರ್ಥ ಹಸ್ತವಿಭಾಗದಲ್ಲಿ ಅಡ್ಡಲಾಗಿ ಹಿಡಿದರೆ ಅರ್ಧಯಾಮವೆಂದೂ ಬಳಸುತ್ತಾರೆ.

ಎರಡೂ ಕೈಯ್ಯಲ್ಲಿ ಚತುರ ಹಸ್ತ ಹಿಡಿದರೆ ಹೂವು ಅಥವಾ ಮಾಲೆಗಳನ್ನು ಸಿಂಗರಿಸಿಕೊಳ್ಳುವುದೆಂದೂ, ಕಣ್ಣಿನ ಬಳಿ ಹಿಡಿದರೆ ಕಾಡಿಗೆ ಹಾಕಿಕೊಳ್ಳುವುದೆಂದೂ, ಕೆಳಮುಖವಾಗಿ ಎದೆಯ ಬಳಿ ಹಿಡಿದರೆ ನಂಬಿಕೆ, ಗಿಳಿ ಅಥವಾ ಸುಲಭ ಸಾಧ್ಯತೆಯನ್ನು, ಅದೇ ಚಲನೆಯನ್ನು ವಿರುದ್ಧವಾಗಿ ಹಿಡಿದರೆ ವಿರುದ್ಧ ವರ್ತನೆಯೆಂದೂ ಅರ್ಥ. ಸರ್ಪಿ (ತುಪ್ಪದ) ಸಾಗರ ಎನ್ನಲು ಚತುರ ಹಸ್ತಗಳನ್ನು ಮೇಲಕ್ಕೆ ಮತ್ತು ಕೆಳಕ್ಕೆ ಎತ್ತಿ ಕೆಳಗಿಳಿಸುವುದು. ಪ್ರದೇಶಸೂಚೀ ಹಸ್ತವಾದ ಮಹಾಮೇರುವನ್ನು ಸೂಚಿಸಲು ಚತುರ ಹಸ್ತಗಳನ್ನು ಮೇಲ್ಮುಖವಾಗಿರಿಸಿ ಮುಂಗೈ ಬಳಿ ಸ್ವಸ್ತಿಕಾಕಾರ ಮಾಡಬೇಕು. ಪನಸ , ಬಿಲ, ಪುನ್ನಾಗ, ಕೇತಕಿ, ಜಪಾಕುಸುಮ ವೃಕ್ಷ ಸೂಚನೆಗೂ ಚತುರದ ಬಳಕೆಯಿದೆ.

ಈ ಹಸ್ತವನ್ನು ನಟರಾಜನ ವಿಭಿನ್ನ ಮುದ್ರೆಗಳಲ್ಲಿಯೂ, ಅರ್ಧ ಯಾಮ ಅಂದರೆ 1 1/2ಗಂಟೆ ಎಂದು ಸೂಚಿಸಲಾಗಿದೆ. ಎಡಗೈಯಲ್ಲಿ ಚತುರಹಸ್ತವನ್ನು ಬಲಗೈಯಲ್ಲಿ ಹಂಸಾಸ್ಯ ಹಸ್ತವನ್ನು ಎದೆಯ ಮುಂದೆ ಇರಿಸಿದರೆ ಬ್ರಹ್ಮಹಸ್ತವೆನಿಸಿಕೊಳ್ಳುತ್ತದೆ. ಚತುರ ಹಸ್ತವನ್ನು ತನ್ನೆಡೆಗೆ ಇದಿರಾಗಿರಿಸಿಕೊಳ್ಳುವುದು ಬ್ರಾಹ್ಮಣಹಸ್ತವೆಂದು ಭರತಾರ್ಣವ ಪ್ರಸ್ತಾಪಿಸಿದೆ. ಭಗಿನೀ ಹಸ್ತದಲ್ಲೂ ಬಳಕೆಯಿದೆ. ಭರತಾರ್ಣವ ಪ್ರಸ್ತಾಪಿಸಿದ ವಿಶೇಷ ಹಸ್ತಗಳ ಪೈಕಿ ಬಲಕೈಯ್ಯಲ್ಲಿ ಚತುರ ಹಸ್ತವನ್ನು ಹಿಡಿದು ಮುಂದಕ್ಕೆ ತಂದು, ಎಡಕೈಯ್ಯಲ್ಲಿ ಮೇಲ್ಮುಖ ಮಾಡುವುದು ಧರ್ಮಯುತವಾದ ಕಾರ್ಯ ಅಥವಾ ಹಿರಿಯರು ಎನಿಸಿಕೊಳ್ಳುತ್ತದೆ. ಬೆಂಕಿ ಎಂದು ಸೂಚಿಸುವಲ್ಲೂ ಇದರ ಪ್ರಸ್ತಾಪವಿದೆ.

**0ಯಕ್ಷಗಾನ**ದಲ್ಲಿ ಕುಂಕುಮ ಇಡುವಿಕೆ0ಯ ಸಂವಹನಕ್ಕಾಗಿ ಬಳಸುತ್ತಾರೆ. **ನಿತ್ಯಜೀವನ**ದಲ್ಲಿ ಈ ಹಸ್ತವನ್ನು 'ಸ್ವಲ್ಪ' ಎನ್ನಲು, ತುಪ್ಪ, ಎಣ್ಣೆ0ಯನ್ನು ಕೈ0ಯಲ್ಲಿ ಹಿಡಿದು ನೋಡಲು, 'ಬಾ' ಎನ್ನಲು ಬಳಸುತ್ತಾರೆ.

ಚತುರ ಹಸ್ತದಲ್ಲಿನ ತೋರು ಬೆರಳನ್ನು ದೂರ ಸರಿಸಿ, ಕಿರುಬೆರಳನ್ನು ಗುಂಪಿಗೆ ಸೇರಿಸುವುದು **ಖಂಡಚತುರ ಹಸ್ತ** ವೆನಿಸಿಕೊಳ್ಳುತ್ತದೆ. ಭರತಾರ್ಣವದಲ್ಲಿ ಉಲ್ಲೇಖಿತ. ವಿನಿಯೋಗ : ಗೋರೋಚನ, ಧೂಳು, ರಕ್ತದಂತಹ ದ್ರವ, ಕರ್ಣಾಮೃತವಾದ ವಿಷಯ, ಯಂತ್ರ, ಆರ್ತನಾದ, ಭೇದ, ಮಂದಾರವೃಕ್ಷ. ಖಂಡ ಚತುರದ ಕಿರುಬೆರಳನ್ನು ಹೊರತೆಗೆದರೆ ಅದು **ಅರ್ಧ ಚತುರ ಹಸ್ತ**ವೆನಿಸಿಕೊಳ್ಳುತ್ತದೆ. ವಿನಿಯೋಗ : ಮಧುರ ರಸವಸ್ತುಗಳ ಆಸ್ವಾದನೆ, ಕೃ ಧಾತು ಅಥವಾ ಮಾಡುವುದು, ಸುವರ್ಣಮುಖೀ ನದಿ. ಎಡಗೈಯ್ಯಲ್ಲಿ ಚತುರವನ್ನು ಅಭಿಮುಖವಾಗಿ ಹಿಡಿದು, ಬಲಗೈಯಲ್ಲಿ ಅರ್ಧಚಂದ್ರವನ್ನು ಚತುರದ ಮೇಲೆ ಇಡುವುದು ಆನಂದ ಪರ್ವತ ಎಂಬ ಪರ್ವತ ಪಕಾರವನು. ಸೂಚಿಸುತ್ತದೆ.













## ನುಡಿ–ನಮನ–ಅಂಜಲಿ

–7ನೇ ಪುಟದಿಂದ

ಅಚ್ಚರಿಯೆಂಬಂತೆ ಯಕ್ಷಗಾನದ 'ಯಕ್ಷದಂಪತಿಗಳು' ಎಚಿದೇ ಖ್ಯಾತರಾದ ಸಾಮಗರು ಮತ್ತು ಕೋಳ್ಯೂರು ರಾಮಚಂದ್ರ ರಾಯರಿಗೆ ಜೊತೆಯಾಗಿಯೇ ಕೇಂದ್ರ ಸಾಹಿತ್ಯ ಅಕಾಡೆಮಿಚು ಪುರಸ್ಕಾರ ಒಲಿದಿತ್ತು. ಯಕ್ಷಗಾನದ ಹಿರಿ–ಕಿರಿಯ ಅದೆಷ್ಟೋ ಕಲಾವಿದರಿಗೆ ಸಮಕಾಲೀನರಾಗಿ ಅವರು ಆದರ್ಶಪ್ರಾಯರೂ ಹೌದು. ಸಂಸ್ಕೃತ, ಕನ್ನಡ, ಸಾಹಿತ್ಯ, ಸಂಗೀತ ಕ್ಷೇತ್ರದ ಆಳ ವಿದ್ವತ್ ಹೊಂದಿದ ಸಾಮಗರು, ತನ್ನ ಪಾತ್ರಗಳ, ವಿಶಿಷ್ಟ ಬಗೆಯ ವಾಗ್ಝರಿಯ ಮೂಲಕ ಯಕ್ಷಗಾನ ಲೋಕಕ್ಕೆ ಕೊಟ್ಟ ಕೊಡುಗೆ ಅವಿಸ್ಮರಣೀಯ. ಅವರ ಅಗಲುವಿಕೆ ಕಲಾದಿಗಂತದ ಕಪ್ಪು ಚುಕ್ಕೆ.

## 'ನೃತ್ಯ : ಅಂದು, ಇಂದು, ಮುಂದು'

–9ನೇ ಪುಟದಿಂದ


ಅವರಿಗೆ ಬೇಕಷ್ಟು ನಿಧಿ ಸುರಿದರೆ ನಮ್ಮ ಮಕ್ಕಳು ಏನನ್ನು ಕಲಿಯಬಹುದು? ನಮ್ಮಿದಿರು ನಡೆವ ಈ ಜೀವನ ಕ್ರಮವನ್ನು ನಾವೆಂತು ಮಾರ್ಪಡಿಸುವೆವು? ಈಗಿನ ಭರತನಾಟ್ಯದ ಬಗೆಯನ್ನು ಅದರ ಮೂಲವನ್ನೇ ತಿರುಚಿ ವ್ಯತ್ಯಾಸ ಮಾಡಿದ್ದಾರೆ. ಹಾಗಾದರೆ ಈಗ ಇದನ್ನು ಭರತನಾಟ್ಯವೆಂದು ಕರೆಯಬಹುದೇ?

ರಂಗಸ್ಥಳ

# ಮತ್ತೆ ಮತ್ತೆ ಕಾಡುವ ನಾವಡರು

✦ ರಾಕೇಶ್ ಕುಮಾರ್ ಕಮ್ಮಜೆ, ಪುತ್ತೂರು.

ನಿಜ ಹೇಳಬೇಕೆಂದರೆ ಕಳೆದೆರಡು ಬಾರಿ ಈ ರಂಗಸ್ಥಳದಲ್ಲಿ ಕಾಣಿಸಿಕೊಂಡಿದ್ದ ವಿಠಲ ಶಾಸ್ತ್ರಿಯವರ ರೋಚಕ ಕಥೆಗಳ ಬಗೆಗೆ ಇನ್ನೂ ಹೇಳುವುದಿತ್ತು. ಕಳೆದ ಬಾರಿಯ ಲೇಖನ ಮುಗಿಸುವ ಹೊತ್ತಿಗೆ ಪುನಃ ವಿಠಲ ಶಾಸ್ತ್ರಿಗಳ ಬಗೆಗೇ ಬರೆಯುವುದೆಂದು ತೀರ್ಮಾನಿಸಿಯೂ ಆಗಿತ್ತು. ಹಾಗಾಗಿ ಅದೇ ಗುಂಗಿನಲ್ಲಿದ್ದ ನನ್ನನ್ನು ಎಚ್ಚರಿಸಿದ್ದು ಮೊನ್ನೆ ಕಳೆದುಹೋದ ದಿನಾಂಕ ಮೇ 27. ಬರೋಬ್ಬರಿ ಇಪ್ಪತ್ತು ವರ್ಷಗಳ ಹಿಂದೆ ಅದೇ ದಿನ ನಡೆದುಹೋದ ದುರಂತವೊಂದು ಯಕ್ಷಲೋಕಕ್ಕೆ ಮರ್ಮಾಘಾತವನ್ನೇ ನೀಡಿತ್ತೆಂದು ಹೇಳಿದರೆ ಖಂಡಿತಾ ಅತಿಶಯೋಕ್ತಿಯಲ್ಲ. ಹೌದು, ಯಕ್ಷಲೋಕ ಕಂಡ ಅತ್ಯಪೂರ್ವ ಕಂಠಸಿರಿಯ ಭಾಗವತ ಗುಂಡ್ಮಿ ಕಾಳಿಂಗ ನಾವಡರು ಗತಿಸಿಹೋದದ್ದು 1990ರ ಮೇ 27ರಂದು!



ಕಾಳಿಂಗ ನಾವಡರು ಗತಿಸಿ ಇಪ್ಪತ್ತು ಸಂವತ್ಸರಗಳು ಸರಿದು ಹೋಗಿದ್ದರೂ ಅವರ ಪರಿಚಯವಿಲ್ಲದವರು ಇಂದಿಗೂ ಇಲ್ಲ! ಪ್ರಾಯಶಃ ವ್ಯಕ್ತಿಯೊಬ್ಬ ಸತ್ತೂ ಬದುಕುವುದೆಂದರೆ ಇದೇ ಇರಬೇಕು. ನಾವಡರು ಇಂದಿಗೂ ಮನೆಮನೆಗಳ ಟೇಪ್‌ರೆಕಾರ್ಡರ್‌ಗಳಲ್ಲಿ, ಸಿ.ಡಿ., ಡಿ.ವಿ.ಡಿ. ಗಳಲ್ಲಿ ಜೀವಂತವಾಗಿದ್ದಾರೆ. ಕ್ಯಾಸೆಟ್‌ನಲ್ಲೇ ಅವರ ಧ್ವನಿ ಕೇಳುತ್ತಾ ಕೇಳುತ್ತಾ ಮೈ ಮರೆಯುವವರು, ಅವರ ಸಾವಿಗಾಗಿ ಮರುಗುವವರು ಅನೇಕ ಮಂದಿ ಈಗಲೂ ಇದ್ದಾರೆ. ಕಾಳಿಂಗ ನಾವಡರೆಂಬ ವ್ಯಕ್ತಿ ತನ್ನ ಜೀವಿತದ ಕೇವಲ ಮೂವತ್ತೆರಡು ವರ್ಷಗಳಲ್ಲಿ ಸಂಪಾದಿಸಿದ ಅಭಿಮಾನಿ ವೃಂದ, ಒಬ್ಬ ಉತ್ತಮ ವೇಷಧಾರಿ ಎಪ್ಪತ್ತು – ಎಂಭತ್ತು ವರ್ಷಗಳ ತನ್ನಿಡೀ ಜೀವನದಲ್ಲಿ ಗಳಿಸಬಹುದಾದ ಅಭಿಮಾನಿಗಳಿಗಿಂತಲೂ ತುಸು ಹೆಚ್ಚೇ ಅನ್ನಬಹುದೇನೋ!

ತಮಾಷೆಯೆಂದರೆ ನಾವಡರು ಸ್ವರ್ಗಸ್ಥರಾದ ಅನಂತರದಲ್ಲಿ ಯಕ್ಷಗಾನ ಬಗೆಗೆ ತಿಳಿದು ಕೊಂಡವರೂ ಅವರ ಅಭಿಮಾನಿಗಳಾಗಿದ್ದಾರೆ ! ಸತ್ತ ನಂತರವೂ ಅಭಿಮಾನಿಗಳನ್ನು ಸೃಷ್ಟಿಸಿಕೊಂಡ ಭಲೇ ಅಪರೂಪದ, ಮಹಾನ್ ವ್ಯಕ್ತಿ ಅವರು ! ಇಂದಿಗೂ ಅವರ ಅಭಿಮಾನಿಗಳ ಸಂಖ್ಯೆ ಏರುತ್ತಲೇ ಇರುವುದು ಅಚ್ಚರಿ ಹಾಗೂ ಸೋಜಿಗದ ಸಂಗತಿ. ನಾವಡರು ನಮ್ಮನ್ನಗಲಿ ಹೋಗುವ ಸಂದರ್ಭದಲ್ಲಿ ಇಂದಿನಂತೆ ಸಿ.ಡಿ., ಡಿವಿಡಿ ಗಳು








ಅಭಿವೃದ್ಧಿ ಹೊಂದಿರಲಿಲ್ಲ. ಹಾಗಾಗಿ ಇಂದು ನಮಗೆ ದೊರಕುತ್ತಿರುವ ನಾವಡರ ಬಹಳಷ್ಟು ಸಿಡಿಗಳು ಕ್ಯಾಸೆಟ್‌ನಿಂದ ಮರು ಎರಕ ಹೊಯ್ದವುಗಳು. ಆದಾಗ್ಯೂ ಅವುಗಳಿಗೆಲ್ಲಾ ಅಧಿಕ ಬೇಡಿಕೆಯಿದೆ. ಹೀಗಿರುವಾಗ ಒಂದೊಮ್ಮೆ ಆವಾಗಲೇ ಈ ಪರಿ ಸಿ.ಡಿ, ಡಿ.ವಿ.ಡಿ.ಗಳಿರುತ್ತಿದ್ದರೆ ಅಥವಾ ನಾವಡರು ಇಂದಿರುತ್ತಿದ್ದರೆ ಅವರ ಅವೆಷ್ಟು ಸಿ.ಡಿ.ಗಳು ನಮ್ಮೆಲ್ಲರ ಮನೆಗಳಲ್ಲಿರುತ್ತಿದ್ದವೋ?

ಕೇವಲ ತನ್ನ ಹದಿಮೂರನೇ ವಯಸ್ಸಿನಲ್ಲೇ (ನಾವೆಲ್ಲಾ ಯಕ್ಷಗಾನದ ಬಗ್ಗೆ ಆ ವಯಸ್ಸಿನಲ್ಲಿ ಸರಿಯಾಗಿ ತಿಳಿದುಕೊಂಡಿದ್ದಿರಲಿಕ್ಕಿಲ್ಲ!) ನಾವಡರು ಭಾಗವತರಾಗಿ ಮೇಳ ಸೇರಿದ್ದರು. ಬರೀ ಹತ್ತೊಂಬತ್ತರ ಹರಯಕ್ಕೆ ಆ ಕಾಲದ ಖ್ಯಾತ ಸಾಲಿಗ್ರಾಮ ಮೇಳದಲ್ಲಿ ಮುಖ್ಯ ಭಾಗವತರಾಗಿಬಿಟ್ಟಿದ್ದರು ! ಅಷ್ಟು ಸಣ್ಣ ವಯಸ್ಸಿನಲ್ಲಿ ಮುಖ್ಯ ಭಾಗವತರಾದ ಅವರ ದಾಖಲೆ ಇನ್ನೂ ಹಾಗೇ ಉಳಿದಿದೆ ಅನಿಸುತ್ತದೆ. ಪ್ರಾಯಶಃ ಅದನ್ನು ಅಳಿಸುವುದೂ ಕಷ್ಟವೇ.

ಸಾಮಾನ್ಯವಾಗಿ ಭಾಗವತರು ಎಷ್ಟೇ ಚೆನ್ನಾಗಿದ್ದರೂ ವೇಷಧಾರಿಗಳಿಗಿಂತ ಹೆಚ್ಚಿನ ಮನ್ನಣೆ ಪಡೆಯುವುದು ಕಷ್ಟವೇ. ಉತ್ತಮವಾಗಿ ಭಾಗವತಿಕೆ ಮಾಡಿದ ಆ ಕ್ಷಣದಲ್ಲಿ ಒಮ್ಮೆ ಚಪ್ಪಾಳೆ ಗಿಟ್ಟಿಸಬಹುದಾದರೂ ಜನಮನದಲ್ಲಿ ದೀರ್ಘಕಾಲ ಕಾಡುವುದು ವೇಷಧಾರಿಯೇ. ಹಾಗಾಗಿ ಹಿಂದೆಲ್ಲಾ ಕೆಲವರು ತಮ್ಮ ನೆಚ್ಚಿನ ಕಲಾವಿದ ರಂಗಪ್ರವೇಶ ಮಾಡುವ ಹೊತ್ತಿಗೇ ಯಕ್ಷಗಾನಕ್ಕೆ ಹೋಗುತ್ತಿದ್ದುದುಂಟು. ಉದಾಹರಣೆಗೆ ದೇವಿ ಮಹಾತ್ಮೆಯಲ್ಲಿ ರಕ್ತಬೀಜ ಮಾಡುವಾತ ನೆಚ್ಚಿನ ಕಲಾವಿದನಾಗಿದ್ದರೆ ಕೆಲವರು ರಕ್ತಬೀಜ ಬರುವ ವೇಳೆಗೇ, ಅಂದರೆ ಸುಮಾರು ಬೆಳಗಿನ ಜಾವ ಮೂರಕ್ಕೆ ಯಕ್ಷಗಾನ ನಡೆಯುವಲ್ಲಿಗೆ ಆಗಮಿಸುತ್ತಿದ್ದುದುಂಟು. ಅಂದರೆ ಆ ವೇಷಧಾರಿಗೋಸ್ಕರ ಯಕ್ಷಗಾನಕ್ಕೆ ಬರುವುದು. ಇದು ಕಲಾವಿದರಿಗೆ ಸಲ್ಲುವ ನಿಜವಾದ ಗೌರವವೂ ಹೌದು.

ವಿಶೇಷವೆಂದರೆ ಆಗಿನ ದಿನಗಳಲ್ಲಿ ವೇಷಧಾರಿಗಾಗಿ ಅಲ್ಲ, ಕಾಳಿಂಗ ನಾವಡರಿಗಾಗಿ ಬರುವವರಿದ್ದರು! ಅಂದರೆ ಅವರು ಭಾಗವತಿಕೆಗೆ ಕುಳಿತುಕೊಳ್ಳುವ ಸಮಯಕ್ಕೆ ಸರಿಯಾಗಿ ಅಂದರೆ ಸುಮಾರು ಮಧ್ಯರಾತ್ರಿ ಎರಡರ ವೇಳೆಗೆ ಜನ ಜಮಾಯಿಸುತ್ತಿದ್ದರು! ನಾವಡರು ಸೃಷ್ಟಿಸಿದ ಮಾಯೆಯೇ ಅಂಥಾದ್ದು.

ಖಂಡಿತಾ, ಕಾಳಿಂಗ ನಾವಡರು ಗತಿಸಿಹೋದದ್ದು ನಮ್ಮೆಲ್ಲರ ದುರದೃಷ್ಟ. ಅವರಿದ್ದಿದ್ದರೆ ಈಗ ಸುಮಾರು ಐವತ್ತೆರಡು ವಯಸ್ಸಾಗಿರುತ್ತಿತ್ತು. ಹಾಗೆಯೇ ಯಕ್ಷಗಾನ ಇನ್ನೂ ಎತ್ತರಕ್ಕೇರಿರುತ್ತಿತ್ತು.



ದರ್ಪಣ

# ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ

**ಕಳೆದ ಸಂಚಿಕೆಯಲ್ಲಿ...**

**(ರುಕ್ಮಿಣೀದೇವಿ ಅರುಂಡೇಲ್ ಅವರು 1944ರಿಂದ -1984ರ ಅವಧಿಯಲ್ಲಿ ಸಂಯೋಜಿಸಿದ ನೃತ್ಯರೂಪಕಗಳು 25. ಅವುಗಳ ಪೈಕಿ ಒಟ್ಟು 6 ಭಾಗಗಳಲ್ಲಿ ವಾಲ್ಮೀಕಿ ರಾಮಾಯಣವು ಸಂಯೋಜನೆಗೊಂಡಿತ್ತು. 4 ಬಗೆಯ ಭಾಗವತ ಮೇಳ ಸಂಯೋಜನೆ, 3 ಬಗೆಯ ಕೊರವಂಜಿ, 12 ಇತರೇ ಸಂಯೋಜನೆಗಳಿದ್ದವು. ಅವರ ನೃತ್ಯರೂಪಕಗಳು ವ್ಯಾಪಕ ಮನ್ನಣೆ ಹೊಂದಿದ್ದವೆಂಬುದಕ್ಕೆ ಆಗಿನ ಕಾಲಕ್ಕೆ ಅವುಗಳಿಗೆ ಒದಗಿದ್ದ ಉತ್ತಮ ವಿಮರ್ಶೆಗಳೇ ಸಾಕ್ಷಿ.)**



**ಜೇ**ಮ್ಸ್ ಕಸಿನ್ ಒಂದೆಡೆ ಹೀಗೆ ಬರೆಯುತ್ತಾರೆ. 'research as to costumes, jewels, and hair dressings ; in the adaptation of the text to stage purposes ; in the synchronizing of words and music, and of these with the rhythms, postures, gestures, groupings and finger-signs(mudras)…" and observed that all these evolved out of the knowledge, experience and imagination of Rukmini Devi…' ಹಾಗಂತ ರುಕ್ಮಿಣೀ ತಾವು ಕಲಿತದ್ದನ್ನೆಲ್ಲಾ ಒಂದೇ ಸಲ ಪ್ರಯೋಗ ಮಾಡುತ್ತಿರಲಿಲ್ಲ. ಸಮಯ, ಸಂದರ್ಭವರಿತು ಸಂಸ್ಕೃತಿಗೆ ಏನು ಅಗತ್ಯವೋ ಅದನ್ನು ಪರಂಪರೆಯ ಅಡಿಪಾಯದಲ್ಲಿ ಹೊಸತಾಗಿ ಪುನರ್ ರೂಪಿಸುತ್ತಿದ್ದರು. ಹಾಗಾಗಿ ಕೊರವಂಜಿ ಸಾಹಿತ್ಯಮಯ ಮತ್ತು ನಿರೂಪಣೆಯಲ್ಲಿ ನಾಟಕೀಯವಲ್ಲದ ನೃತ್ಯ ಎಂಬುದನ್ನು ಅರಿತು ತಾವು ಕಲಿತಿದ್ದ ಬ್ಯಾಲೆಯಾಗಲೀ, ಅಥವಾ ನಾಟಕೀಯ ಕಲಾಭಾಗವೆನಿಸುವ ಕಥಕಳಿ, ಭಾಗವತಗಳು ಕೊರವಂಜಿಯ ನಿರೂಪಣೆಗೆ ಬಳಸಿಕೊಳ್ಳಲಿಲ್ಲ.

ಅದು ಕೊರವಂಜಿಯ ಮೊದಲ ಪ್ರದರ್ಶನ..ತಮ್ಮ ಕಲಾಕ್ಷೇತ್ರ ಬಳಗದ ಜೊತೆಗೆ ಮುಂಬೈಗೆ ಪ್ರದರ್ಶನಕ್ಕೆ ತೆರಳಿದ್ದರು. ತಮ್ಮ ಬಿಡುವಿಲ್ಲದ ಕೆಲಸಗಳ ನಡುವೆಯೂ ಕೇವಲ 11 ದಿನಗಳಲ್ಲಿ ವೇಷಭೂಷಣ, ರಂಗ ಪರಿಕರ, ಸಂಗೀತವನ್ನು ವ್ಯವಸ್ಥೆ ಮಾಡಿದ್ದರು. ತಾಂತ್ರಿಕ ವಿಷಯಗಳಲ್ಲಿ ಅಲೆಕ್ಸ್ ಎಲ್ಮೋರ್, ನಂತರ ಪಾಲ್ ಸ್ಟಾರ್ಮ್ ಅವರು ಬೆಳಕು, ಧ್ವನಿವರ್ಧಕ ಸಹಕಾರವೀಯುತ್ತಿದ್ದರು. ಅದರಲ್ಲೂ ವಿದೇಶಿ ತಂತ್ರಜ್ಞರಿಗೆ ಭಾರತೀಯ ರಂಗದ ಪರಿಜ್ಞಾನ ಅಷ್ಟಾಗಿ ಇರಲಿಲ್ಲವಾದದ್ದರಿಂದ ಅದಕ್ಕೂ ರುಕ್ಮಿಣೀ ಅವರ ಮಾರ್ಗದರ್ಶನ್ನೈಲ್ಲದೇ ಅಗುತ್ತಿರಲಿಲ್ಲ. ಅವರ ಉಳಿದ ನೃತ್ಯರೂಪಕಕ್ಕಿಂತಲೂ ಮಿಗಿಲಾಗಿ ಮೊದಲ ನೃತ್ಯ ರೂಪಕದ ಸಂಯೋಜನೆಗೆ ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ.







ಅವರೊಮ್ಮೆ ಬಹಳ ಕಾಲದ ನಂತರ ಹೀಗೆ ಹೇಳಿದ್ದರಂತೆ ; 'ನನಗೆ ಅಷ್ಟು ಧೈರ್ಯ ಹೇಗೆ ಬಂತೋ ಗೊತ್ತಿಲ್ಲ. ಅದನ್ನೇ ನಾನು ಈಗ ಮಾಡಬೇಕೆಂದರೆ ಸಾಧ್ಯವಾಗುತ್ತಿರಲಿಲ್ಲವೇನೋ! ಅದರ ಸುಂದರ ಸಾಹಿತ್ಯ, ಭಕ್ತಿಮಯ ವಾತಾವರಣ ನನ್ನನ್ನು ಬಹಳ ಪ್ರೇರಿಸಿತು. ಇಂದಿಗೂ ಅದು ತನ್ನ ಭಾವನಾತ್ಮಕವಾದ ಅತೀತ ಅನುಭವ.

ರುಕ್ಮಿಣೀ ಎಂದಿಗೂ ತನ್ನನ್ನು ಪರಂಪರೆಯ ಪ್ರತಿನಿಧಿಯೆಂದೋ, ಸುಧಾರಕಿಯೆಂದೋ ಕರೆಸಿ ಕೊಳ್ಳಲು ಇಷ್ಟಪಡಲಿಲ್ಲ. ಅಷ್ಟಕ್ಕೂ ಇಂತಹ ಅದೆಷ್ಟೋ ನೃತ್ಯಭಾಗಗಳು ಮೊದಲು ಹೇಗಿದ್ದವು ಎಂಬುದಕ್ಕೆ ಅಂತಹ ಬಲವಾದ ಸಾಕ್ಷಿಗಳಾಗಲೀ, ಮಾಹಿತಿಗಳಾಗಲೀ ಲಭ್ಯವಿರಲಿಲ್ಲ. ಆದರೇನಂತೆ? ಇತಿಹಾಸವಲ್ಲದಿದ್ದರೂ ನಮ್ಮ ಕಲ್ಪನೆಗಳಿಂದ ಅದರ ಸ್ವರೂಪವನ್ನು ಕಂಡುಕೊಳ್ಳಬಹುದಲ್ಲವೇ?

ಅವರ ಶಿಷ್ಯೆ ಶಾರದ ಹಾಪ್‌ಮನ್ ಅವರು ಒಂದೆಡೆ ಹೀಗೆ ಹೇಳುತ್ತಾರೆ. 'ರುಕ್ಮಿಣೀ ದೇವಿ ಅವರ ನೃತ್ಯರೂಪಕಗಳು ಪರಂಪರೆಯನ್ನೇ ಪ್ರತಿನಿಧಿಸುತ್ತವೆ ಎಂಬುದನ್ನು ಅಷ್ಟು ಕರಾರುವಕ್ಕಾಗಿ ಹೇಳಲಾಗುವುದಿಲ್ಲ. ಆದರೆ ಪರಂಪರೆಯ ಆತ್ಮವನ್ನು ಒಯ್ಯುವಲ್ಲಿ ಮತ್ತು ಕಾಣಿಸುವಲ್ಲಿ ನಿಚ್ಚಳವಾಗಿ ಅದರ ಪ್ರಭಾವ ತುಂಬಾ ದೊಡ್ಡದು. ಆದ್ದರಿಂದ ರುಕ್ಮಿಣೀ ಅವರ ಸ್ವಂತಿಕೆಗೆ ಇಲ್ಲಿ ಜಾಸ್ತಿ ಮಹತ್ತ್ವ.'

ಕೇವಲ ದಾನವಾಗಿ ಬಂದದ್ದೋ ಅಥವಾ, ದಾಟಿಸಲ್ಪಟ್ಟ ಪರಂಪರೆ ಎನ್ನುವುದು ಯಾವತ್ತಿಗೂ ಜೀವನದ ನಾಡಿಮಿಡಿತವಾಗಲು ಸಾಧ್ಯವಿಲ್ಲ. ಅದು ಆಗಾಗ ಪುನರ್ ವಿಮರ್ಶೆ, ಮಂಥನ, ಸಮಕಾಲೀನ ದೃಷ್ಟಿಯ ನೋಟಗಳನ್ನು ಪಡೆಯುತ್ತಾ ಅದರ ಸತ್ತ್ವವನ್ನು ಉಳಿಸಿಕೊಳ್ಳುತ್ತಲೇ ಇರಬೇಕು. ಇಲ್ಲವಾದಲ್ಲಿ ಅದು ಕಾಣೆಯಾಗುವ ಅಥವಾ ಜೀವನದ ಜೊತೆಗಿನ ಸಂಬಂಧ ಮತ್ತು ಪ್ರಸ್ತುತತೆಯನ್ನು ಕಳೆದುಕೊಳ್ಳುವ ಅಪಾಯ ಸದಾ ಇರುತ್ತದೆ.

ಅದೇ ಕಡು ಮಡಿವಂತರು ಪರಂಪರೆಯ ಶುದ್ಧತೆಯ ಬಗ್ಗೆ ಮಾತಾಡುತ್ತಾ ಅದರ ಬದಲಾವಣೆಗಳನ್ನು, ಹೊಸತನ್ನು ನಿರಾಕರಿಸುತ್ತಾರೆ. ಇದಕ್ಕೆ ಸಾಕ್ಷಿ ಬೇರೆ ಬೇಕಿಲ್ಲ. ರುಕ್ಮಿಣೀ



**'ಅಷ್ಟೆಲ್ಲಾ ಗಡಿಬಿಡಿ, ಒದ್ದಾಟಗಳಾದರೂ ಒಮ್ಮೆ ಯಶಸ್ಸು ಸಿಕ್ಕಿತೆಂದರೆ ಅದೇ ಒಂದು ಬಗೆಯ ನೆಮ್ಮದಿ, ಬಿಡುವು' ಎಂಬುದು ರುಕ್ಮಿಣೀಯವರ ಭಾವನೆ. ಹೀಗೆ ಪ್ರತಿಯೊಂದು ಪ್ರದರ್ಶನಗಳಲ್ಲೂ ಕೊರವಂಜಿಯ ಪ್ರತಿ ಭಾಗಗಳು, ನಿರೂಪಣೆ ಮತ್ತಷ್ಟು ಚೆಂದದ ರೂಪ ಪಡೆಯುತ್ತಿದ್ದವು. ಕೊರವಂಜಿಯ ಮುಖ್ಯ ಪ್ರದರ್ಶನಗಳಲ್ಲಿ ಕುಟ್ರಾಲಂ ದೇವಸ್ಥಾನದಲ್ಲಿ ಜರುಗಿದ್ದು ಅತೀ ಆಪ್ತವಾದದ್ದು ಎನ್ನುವುದು ರುಕ್ಮಿಣೀ ಅವರ ಅನಿಸಿಕೆ. ಇಂದಿಗೂ ಕಲಾಕ್ಷೇತ್ರದ ಸುಂದರ ನೃತ್ಯರೂಪಕಗಳ ಪೈಕಿ ಕೊರವಂಜಿಯೇ ಅತ್ಯಂತ ಶ್ರೇಷ್ಟದ್ದು ಎಂಬುದು ಕಲಾರಸಿಕರ ಅಭಿಪ್ರಾಯ.**



ದೇವಿ ಅವರ ಸಹೋದರ ಯಜ್ಞೇಶ್ವರ ಶಾಸ್ತ್ರಿ. ನಿಧಾನವಾಗಿ ರುಕ್ಮಿಣೀ ಅವರ ಪ್ರಯತ್ನಗಳಿಗೆ ಕಟು ವಿಮರ್ಶೆಗಳನ್ನು ಮಾಡುತ್ತಾ ಕಲಾಕ್ಷೇತ್ರದಿಂದ ದೂರ ಸರಿಯುತ್ತಲೇ ಹೋದರು. ಅವರಿಗೆ ರುಕ್ಮಿಣೀ ಅವರ ವಿನೂತನ ಪ್ರಯತ್ನಗಳು ಚೆನ್ನಾಗಿ ಕಂಡರೂ ಎಲ್ಲಿ ಕೊನೆಗೆ ಒಳಿತಿಗಿಂತ ಕೆಡುಕನ್ನೇ ಕಾಣುವಂತೆ ಮಾಡುತ್ತವೋ ಎಂಬ ಹೆದರಿಕೆ ಇತ್ತು ! ಹೊಸತು ಮತ್ತು ಪರಂಪರೆಯ ತಪ್ಪಾದ ಸಾಂಗತ್ಯ ಸಾಂಸ್ಕೃತಿಕ ಪರಂಪರೆಯನ್ನೇ ಹಾಳುಗೆಡಹುವುದಲ್ಲದೆ ಯಾವುದು ಹೊಸತು ಮತ್ತು ಯಾವುದು ಹಳತು ಎಂಬುದನ್ನು ಸರಿಯಾಗಿ ಕಾಣಲು, ಪ್ರತ್ಯೇಕಿಸಲು ಬರುವುದಿಲ್ಲ ಎಂಬುದು ಅವರ ಅನಿಸಿಕೆಯಾಗಿತ್ತು. ಆದರೆ ಪರಂಪರೆ ಎನ್ನುವುದು ವಸ್ತು ಸಂಗ್ರಹಾಲಯದ ಪಳೆಯುಳಿಕೆಯಲ್ಲ ; ಬದಲಾಗಿ ಜೀವಿತದಲ್ಲಿ ಪ್ರತಿಭಾವಂತರ ಫಲದಿಂದಾಗಿ ಬೆಳೆಯುವ, ಬದಲಾವಣೆಗೊಳಪಡುವ, ಪುನರ್‌ರಚಿಸುವ ಪ್ರಕ್ರಿಯೆಯುಳ್ಳದ್ದು ಎಂಬುದು ಈಗಿನಂತೆ ಆಗಿನ ಕಾಲದಲ್ಲೂ ಗೊತ್ತಿರದಿದ್ದ ಬಹಳಷ್ಟು ಮಂದಿ ಇದ್ದರು !

**(ಸಶೇಷ..)**

**ಆತ್ಮೀಯ ಓದುಗರೇ/ ಕಲಾವಿದ ಮಿತ್ರರೇ,**

**ನೃತ್ಯದ ಕುರಿತಂತೆ ಸಂಶೋಧನೆಯೊಂದಕ್ಕೆ ನಿಮಗೆ ತಿಳಿದಂತೆ ಇರುವ ಮಾಹಿತಿಗಳು ಬೇಕಾಗಿದೆ. ಭಾರತೀಯ ಶಾಸ್ತ್ರೀಯ ನೃತ್ಯಗಳ ಪೈಕಿ (ಯಕ್ಷಗಾನವನ್ನೂ ಸೇರಿಸಿದಂತೆ) ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಸಾಮಾಜಿಕ ಸಮಸ್ಯೆಗಳ ಬಗ್ಗೆಯೋ, ಅಥವಾ ನಿಶ್ಚಿತ ವ್ಯವಸ್ಥೆಯ ಕುರಿತು ಅರಿವು, ಪ್ರಜ್ಞೆ ಮೂಡಿಸುವ ನಿಟ್ಟಿನಲ್ಲಿ ಕೈಗೊಂಡ ಪ್ರದರ್ಶನ/ ಸಂಯೋಜನೆ/ ನೃತ್ಯ/ ರೂಪಕಗಳ ವಿವರಗಳಿದ್ದರೆ**

**ಪತ್ರಿಕೆಯ ವಿಳಾಸಕ್ಕೆ ಕಳುಹಿಸಿಕೊಡಿ. ನಿಮ್ಮ ಸಹಕಾರವನ್ನು ಸ್ಮರಿಸಲಾಗುವುದು.**







## ಒಳನೋಟ

- 7th May : Vyjayanati Kashi performence at Law College, Hassan and on 13th May: Jnana Jyothi Auditorium, Bangalore and on 9th June at Godrej Academy, Mumbai.
- 10th May : Nrityabhishekam –by Lakshmi, Disciple of Veena M.Samaga. Venue : Rajangana, Udupi.
- May 24th to May 30th : Talamaddale sapthaha- ‘Saptha Sandhana’ organised be Dept of Kannada and Culture and Yakshagana Kalaranga. Matti Maralidhara Rao Award to Bare Keshava Bhat. Venue : Rajangana, Udupi.
- 12th June : Rangarpane- by Swathi K.disciple of Poornima Gururaj. Venue : ADA Rangamandir, Bangalore.
- 12 to 16th June : Ankura – A festival of Young Dancers organised by Dept of Youth Service and Sports & Karnataka Nritya kala Parishat venue : Yavanika, Bangalore.
- 13th June : Panel Discussion by accompanied dancers and Artists of Bangalore and facilitation to Vyjayanti Kashi at Yvanika, Bangalore.
- 13 June : Arangetram of Kumari Janani Rajkumar ; disciple of Padmaja Suresh Bharatiya vidyabhavan, Bangalore.
- 19th June : Kuchipudi Rangapooja of Ms. Vidya at ADA Rangamandira, Bangalore 6.30pm.
- 25th, 26th and 27th June : Kuchipudi Workshop at Shambhavi Dance Theatre, Bangalore.
- Dr. Suparna Venkatesh, MA.,.M.phil ,in dance. visiting professor at Bangalore university dance department and Director of Sai arts international has secured Ph.D from Bangalore University for her thesis on ‘devadasis of karnataka, and their contribution for dance’.

### ನಿಮ್ಮ ಬರಹ ನಮ್ಮ ಓದು...

**ಬೆಳ್ತಂಗಡಿಯ ಉರುವಾಲಿನ ನಾಗೇಶ್ ಆಗೇರ್, ಶಾರ್ವರಿ, ಉಜಿರೆಯ ರಾಘವೇಂದ್ರ ಬಿ. ರಾವ್, ಸಾಗರದ ಸತ್ಯನಾರಾಯಣ ಈ ಸಾಲಿನ ಸದಸ್ಯರಾಗಿದ್ದಾರೆ.**

I enjoyed composing music to Shakunta Koojana- A Dance drama. Prof. Udyavara Madhavacharya is a great Sahithi and Dr. Vasundhara Doraiswamy is a great dancer. The Article has come out beautifully.

**-Vidushi P. Ramaa, Vocal Artist, Mysore.**

## ಮುದ್ರಾರ್ಣವ

ಭಾರತೀಯ ನೃತ್ಯಗಳು–ವೇದ–ವಿದ್ಯೆ–ವಿಜ್ಞಾನ–ತಂತ್ರ–ಮಂತ್ರ–ಪುರಾಣ–ಯೋಗ–ವೈದ್ಯ–ಚಿಕಿತ್ಸಾ ವಿಧಾನಗಳಲ್ಲಿ ಕಂಡುಬರುವ ಹಸ್ತ –ಮುದ್ರೆಗಳ ಕುರಿತಾದ ; 1000ಕ್ಕೂ ಮಿಗಿಲು ಹಸ್ತ–ಮುದ್ರೆಗಳ ಆಳ ಅಧ್ಯಯನ, ಶ್ಲೋಕ, ಹಿನ್ನಲೆಯುಳ್ಳ, ಬಹುಮುಖೀ ಚಿಂತನೆಯ ಸಂದರ್ಶನ–ಸಮೀಕ್ಷೆ– ಪುರಾತನ ಗ್ರಂಥ ಪರಾಮರ್ಶನಗಳನ್ನೊಳಗೊಂಡ ವಿದ್ವಾಂಸರ ಮನ್ನಣೆ ಪಡೆದ ಸಂಶೋಧನಾ ಕೃತಿ.

**ಬೆಲೆ : 250/– ರೂ. ಸಂಪರ್ಕಿಸಿ. 99641 40927**

---

**ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು ; ಮುದ್ರಣ ನಿಧಿಗೆ ಸಹಕರಿಸಬಹುದು ; ಪತ್ರಿಕೆ ಮತ್ತು ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು ; ಹೆಸರು ನೋಂದಾಯಿಸಿ ಬಳಗದವರಾಗಬಹುದು.**

**ವಿಷ್ಣುಪ್ರಸಾದ್ ನಿಡ್ಡಾಜೆ,** ಪ್ರಸರಣಾಧಿಕಾರಿ ( ಮೊಬೈಲ್ : 94817 65544)
**ಎನ್. ರಾಮ ಭಟ್,** ಉಡುಪಿ (ಮೊಬೈಲ್ : 92414 42833)
ಸಿ. **ಎಸ್. ರಾಮಚಂದ್ರ ಹೆಗಡೆ,** ಬೆಂಗಳೂರು. ( ಮೊಬೈಲ್ : 99863 72503)
**ಪ್ರೊ. ವೆಂಕಟೇಶ್ ಪೈ,** ಮುಂಬೈ. ( ಮೊಬೈಲ್ : 098699 21397)
**ಬಿ.ಜಿ. ನಾರಾಯಣ ಭಟ್,** ಮಡಿಕೇರಿ ( ಫೋನ್ : 08272–222709)

**ನೂಪುರ ಭ್ರಮರಿಯ ಬಳಗವು**

**ಭರತನಾಟ್ಯ, ಮತ್ತು ನೃತ್ಯ ಶೈಲಿಗಳಿಗೆ ಸಂಬಂಧಿಸಿದಂತೆ ಅರಿವಿನ ವಿಸ್ತರಣೆಗಾಗಿ**

1. ಭಾರತೀಯ ಶಾಸ್ತ್ರೀಯ ನೃತ್ಯಗಳು ಮತ್ತು ಜೀವನಾನುಸಂಧಾನ
2. ಭರತನಾಟ್ಯದ ಆಂಗಿಕಾಭಿನಯ
3. ನಾಯಿಕಾ–ನಾಯಕಾ ಭಾವ
4. ಹಸ್ತಮುದ್ರಾ ವಿನ್ಯಾಸಗಳು ಮತ್ತು ಸಂಶೋಧನೆ
5. ನೃತ್ಯ ಇತಿಹಾಸ ಮತ್ತು ಪುನರುತ್ಥಾನ
6. ನೃತ್ಯ ಗ್ರಂಥಗಳು ಮತ್ತು ಅವುಗಳೆಡೆಗೆ ಸಮಗ್ರ ದೃಷ್ಟಿ

**ಮೇಲ್ಕಂಡ ವಿಚಾರಗಳನ್ನು ಒಳಗೊಂಡಂತೆ ವಿವಿಧ ವಿಷಯಗಳಲ್ಲಿ ಉಪನ್ಯಾಸ– ಪ್ರಾತ್ಯಕ್ಷಿಕೆಗಳನ್ನು ನೀಡುತ್ತಾ ಬಂದಿದ್ದು ; ಕಾರ್ಯಕ್ರಮಗಳಿಗಾಗಿ ಆಸಕ್ತರು/ಸಂಸ್ಥೆಗಳು ಪತ್ರಿಕೆಯ ಸಂಪಾದಕರನ್ನು ಸಂಪರ್ಕಿಸಬಹುದು.**

**ದೂ : 99641 40927**

---







ನೂಪುರ ಭ್ರಮರಿ

...ನರ್ತನ ಜಗತ್ತಿಗೊಂದು ಪರಿಭ್ರಮಣ

## ಚಂದಾ ವಿವರ

ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯ ಖರ್ಚು ವೆಚಗಳನ್ನು ಸರಿತೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ಆತ್ಮೀಯ ಓದುಗರಾದ ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಮೊದಲಿನಿಂದಲೂ ನೂಪುರ ಭ್ರಮರಿಗೆ ಚಂದಾ ವಿವರ ಕಡ್ಡಾಯವಲ್ಲ ಮತ್ತು ಓದುಗರ ಸಂಪರ್ಕಕ್ಕೆ ಅದೊಂದೇ ಮಾನದಂಡವೂ ಅಲ್ಲ. ಹಾಗಾಗಿ ಎಷ್ಟೋ ಬಾರಿ ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಹೆಚ್ಚುತ್ತಿರುವ ಪ್ರಸರಣ ಸಂಖ್ಯೆ ಮತ್ತು ಖರ್ಚು–ವೆಚ್ಚಗಳನ್ನು ಗಮನಿಸಿದಾಗ ಮತ್ತು ಪ್ರಿಯ ಓದುಗರ ಅಪೇಕ್ಷೆಯಡಿಯಲ್ಲಿ ಚಂದಾವಿವರಗಳನ್ನು ಕೊಡುತ್ತಿದ್ದೇವೆ. ರಶೀದಿಯನ್ನು ಕಳಿಸಿಕೊಡಲಾಗುವುದು. ಈಗಾಗಲೇ ಸದಸ್ಯರಾದವರು ಇದನ್ನು ಪರಿಗಣಿಸಬೇಕಿಲ್ಲ.  ಮೊತ್ತವನ್ನು ಕಳಿಸುವವರು ಮನಿಯಾರ್ಡರ್ ಅಥವಾ 'ಸಂಪಾದಕರು, ನೂಪುರ ಭ್ರಮರಿ' ಎಂಬ ಹೆಸರಿಗೆ ಡಿ.ಡಿ ಕಳಿಸುವುದು ಉತ್ತಮ. ಚೆಕ್ ಕಳಿಸುವುದಿದ್ದಲ್ಲಿ ಕಮಿಷನ್ ಮೊತ್ತ 40/– ರೂ ಸೇರಿಸಿ ಕಳಿಸುವುದು. ಸಹಕರಿಸಿ.

| | |
|---|---|
| ವಾರ್ಷಿಕ ಚಂದಾ : (ಅಂಚೆ ವೆಚ್ಚ ಸಹಿತ) | : ರೂ. 100/– |
| ಪೋಷಕ | : ರೂ. 1,000/– |
| ಮುದ್ರಣ ನಿಧಿ ( ಮಹಾಪೋಷಕ) | : ರೂ . 3,500/– |

---


ಚಂದಾ/ಪೋಷಕ/ಮಹಾಪೋಷಕ

............................ ಸಾಲಿನ ಸದಸ್ಯನಾಗಲು / ಅಥವಾ ..............................................
.....ಈ ಸಾಲಿನಿಂದ  ಪೋಷಕ/ ಮಹಾಪೋಷಕನಾಗಲು ಇಚ್ಛಿಸಿದ್ದು ಮೊತ್ತ ರೂ.....................
..........................................................................ಗಳನ್ನು ಎಂ.ಒ/ಡಿಡಿ ಮೂಲಕವಾಗಿ ...
........................................ದಿನಾಂಕದಂದು ಕಳಿಸಿರುತ್ತೇನೆ.
ವಿಳಾಸ : ..............................................................................................
......................................................................................................
......................................................................................................

ಸಹಿ/–

---

ನೂಪುರ ಭ್ರಮರಿಯ ಈ ಸಂಚಿಕೆ ನಿಮಗೆ ಉಚಿತ/ ಗೌರವ/ 2010ನೇ ಸದಸ್ಯ/ ಪೋಷಕ/ ಮಹಾಪೋಷಕ ಪ್ರತಿಯಾಗಿರುತ್ತದೆ. ನಿಮ್ಮ ಸದಸ್ಯತ್ವದ ನವೀಕರಣ ಶಾಶ್ವತ/........................... ...........ದಂದು ಮಾಡಬೇಕಾಗಿರುತ್ತದೆ.



If not delivered please return to :
ನೂಪುರ ಭ್ರಮರಿ
'ಸಾನ್ನಿಧ್ಯ' ಪ್ರಕಾಶನ
ದೇಚೂರು ರಸ್ತೆ,
ಅಶ್ವತ್ಥಕಟ್ಟೆ ಸಮೀಪ
ಮಡಿಕೇರಿ, ಕೊಡಗು- 571201

ಫೋನ್ ನಂ : 9964140927
ವೆಬ್ ಸೈಟ್ :
www.noopurabhramari.com
ಈ ಮೈಲ್ ವಿಳಾಸ :
feedback@noopurabhramari.com
editor@ noopurabhramari.com